# ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ನಿಯಮಗಳು, 1964

## ಭಾಗ-I

### ಸಾಮಾನ್ಯ

**ನಿಯಮಗಳು:**

1. ಶೀರ್ಷಿಕೆ
2. ಪರಿಭಾಷೆಗಳು

## ಭಾಗ-II

### ಪರಿಷತ್ತಿಗೆ ನೇಮಕಾತಿ

3. ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ
4. ಕರ್ನಾಟಕ ವೈದ್ಯಕೀಯ ಪರಿಷತ್ತಿನ ಸದಸ್ಯರ ಮತ್ತು ಭಾರತೀಯ ವೈದ್ಯಕೀಯ ಪರಿಷತ್ತಿನ ಕರ್ನಾಟಕ ರಾಜ್ಯ ಶಾಖೆಗಳು ಮತ್ತು ಭಾರತೀಯ ತರಬೇತಿ ಹೊಂದಿದ ದಾದಿಯರ ಸಂಘಕ್ಕೆ ಚುನಾವಣೆ ಮತ್ತು ರಾಜ್ಯ ಸರ್ಕಾರದಿಂದ ಸದಸ್ಯರ ನಾಮನಿರ್ದೇಶನ.
5. ಇತರ ಮತಕ್ಷೇತ್ರಗಳಿಂದ ಸದಸ್ಯರ ಚುನಾವಣೆಯಾಗಬೇಕಾದ ವಿಧಾನ
6. ಆಕಸ್ಮಿಕ ಖಾಲಿಸ್ಥಾನಗಳು

## ಭಾಗ-III

### ನೋಂದಣಿ

7. ರಿಜಿಸ್ಟರನ್ನು ವಿಭಾಗ ಮತ್ತು ಭಾಗಗಳಾಗಿ ವರ್ಗೀಕರಿಸುವುದು ಮತ್ತು ವಿಭಜಿಸುವುದು
8. ರಿಜಿಸ್ಟರಿನಲ್ಲಿ ದಾಖಲಾತಿ
   (6) ಪಠ್ಯಕ್ರಮ (ದಾದಿಯರು)
   (7) ಪಠ್ಯಕ್ರಮ (ಸಹಾಯಕ ದಾದಿ-ಸೂಲಗಿತ್ತಿ)
   (8) ಪಠ್ಯಕ್ರಮ (ಸೂಲಗಿತ್ತಿಯರು)
9. ವಿಳಾಸ ಬದಲಾವಣೆ
10. ಪರಿವೀಕ್ಷಣೆ
11. ನವೀಕರಣ ಶುಲ್ಕಗಳು
12. ನೋಂದಣಿಯ ನಿರಾಕರಣೆ ಮತ್ತು ನವೀಕರಣ ಮತ್ತು ಹೆಸರುಗಳನ್ನು ಪುನಃ ನಮೂದಿಸುವುದು
13. ವಿಚಾರಣೆಯ ವಿಧಾನ

14. ನೋಂದಣಿ ಮತ್ತು ಹೆಸರುಗಳನ್ನು ಪುನಃ ನಮೂದಿಸುವುದು

15. ಪಟ್ಟಿಗೆ ನಿಯಮ 12, 13 ಮತ್ತು 14ನ್ನು ಅನ್ವಯಿಸುವುದು.

**ಭಾಗ–IV**

**ವೃತ್ತಿ ನಡೆಸುವುದಕ್ಕೆ ಹಕ್ಕುಳ್ಳ ವ್ಯಕ್ತಿಗಳು ಮತ್ತು ಲೈಸೆನ್ಸ್ ನೀಡಿಕೆ ಪ್ರಾಧಿಕಾರಗಳ ನಿಯಂತ್ರಣ**

16. ಪ್ರಕರಣ 19(1)(ಬಿ)ರ ಉದ್ದೇಶಕ್ಕಾಗಿ ದಾದಿ, ಸೂಲಗಿತ್ತಿ, ಸಹಾಯಕದಾದಿ – ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕರಾಗಿ ತರಬೇತಿ ಪಡೆಯುವ ವಿಧಾನ

17. ನೋಂದಾಯಿತ ವ್ಯಕ್ತಿಗಳ ಮತ್ತು ಪಟ್ಟಿಯಲ್ಲಿರುವ ವ್ಯಕ್ತಿಗಳ ಮೇಲ್ವಿಚಾರಣೆ

**ಭಾಗ–V**

**ದಾದಿಯರ ಕಾರ್ಯಸಂಸ್ಥೆಗಳು**

18. ದಾದಿಯರ ಕಾರ್ಯಸಂಸ್ಥೆಗಳು

**ಭಾಗ–VI**

**ದಾದಿಯರ ಕಾರ್ಯಸಂಸ್ಥೆಗಳು**

19.ಅನುಮೋದನೆಯನ್ನು ಹಿಂತೆಗೆದುಕೊಳ್ಳುವುದು ಅಥವಾ ಅನುಮೋದನೆ ಅಥವಾ ಮಾನ್ಯತೆಯನ್ನು ನಿರಾಕರಿಸುವುದು.

**ಭಾಗ–VII**

**ಸಂಕೀರ್ಣ**

20. ಶುಲ್ಕಗಳು

**ಪರಿಶಿಷ್ಟ I**

ನಮೂನೆ 'ಎ' ಯಿಂದ 'ಎಚ್' ಯವರೆಗೆ – ನಮೂನೆಗಳು

ಪರಿಶಿಷ್ಟ II–1 ರಿಂದ ಪರಿಶಿಷ್ಟ II–5

**ಅಧಿಸೂಚನೆ**

**ಬೆಂಗಳೂರು, ದಿನಾಂಕ 19ನೇ ಸೆಪ್ಟೆಂಬರ್ 1964**

ಜಿ.ಎಸ್.ಆರ್–273ಎ–ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961 (1962ರ ಕರ್ನಾಟಕ ಅಧಿಯಮ ಸಂಖ್ಯೆ 4) ರ ಪ್ರಕರಣ 29ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ. ಇದರ ಕರಡನ್ನು ದಿನಾಂಕ 5ನೇ ಡಿಸೆಂಬರ್, 1963ರಂದು ಸದರಿ ಅಧಿನಿಯಮದ ಪ್ರಕರಣ 29ರ ಉಪ–ಪ್ರಕರಣ (1)ರ ಮೂಲಕ ಅಗತ್ಯಪಡಿಸಲಾದಂತೆ ಕರ್ನಾಟಕ ರಾಜ್ಯಪತ್ರದ ಭಾಗ-IV 2ಸಿ(i)ರಲ್ಲಿ ಅಧಿಸೂಚನೆ ಸಂ. ಪಿಎಲ್ಎಂ 22 ಎಂಡಿಎ 62, ದಿನಾಂಕ 22ನೇ ನವೆಂಬರ್ 1963ರ ಮೂಲಕ ಪ್ರಕಟಿಸಲಾಗಿರುತ್ತದೆ, ಎಂದರೆ:–

**ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು**

**ಆರೋಗ್ಯ ಸಂದರ್ಶಕರ ನಿಯಮಗಳು, 1964**

**ಭಾಗ–I**

**ಸಾಮಾನ್ಯ**

**1. ಶೀರ್ಷಿಕೆ.–** ಈ ನಿಯಮಗಳನ್ನು ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ನಿಯಮಗಳು, 1964 ಎಂದು ಕರೆಯತಕ್ಕದ್ದು.

**2. ಪರಿಭಾಷೆಗಳು.–** ಈ ನಿಯಮಗಳಲ್ಲಿ ಸಂದರ್ಭಗಳು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ)"ಅಧಿನಿಯಮ" ಎಂದರೆ, ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961.

(ಬಿ) "ನಮೂನೆ" ಎಂದರೆ ಈ ನಿಯಮಗಳಿಗೆ ಲಗತ್ತಿಸಿರುವ ನಮೂನೆ.

(ಸಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ.

(ಡಿ) "ರಿಜಿಸ್ಟ್ರಾರ್" ಎಂದರೆ, ಉಪ ವಿಧಿಗಳಡಿಯಲ್ಲಿ ಪರಿಷತ್ತಿನಿಂದ ನೇಮಕವಾದ ರಿಜಿಸ್ಟ್ರಾರ್;

(ಇ) "ಅನುಸೂಚಿ " ಎಂದರೆ, ಈ ನಿಯಮಗಳಿಗೆ ಲಗತ್ತಿಸಲಾದ ಅನುಸೂಚಿ;

(ಎಫ್) "ಪ್ರಕರಣ" ಎಂದರೆ ಈ ಅಧಿನಿಯಮದ ಪ್ರಕರಣ.

# ಭಾಗ- II

## ಪರಿಷತ್ತಿಗೆ ನೇಮಕಾತಿ

**3. ಪರಿಷತ್ತಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ.–**

(1) ಈ ನಿಯಮಗಳನುಸಾರವಾಗಿ ಯುಕ್ತ ಸೂಚನೆಯನ್ನು ನೀಡಿದ ಉದ್ದೇಶಕ್ಕಾಗಿ ವಿಶೇಷವಾಗಿ ಆಯೋಜಿಸಲಾದ ಸಭೆಯಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಯತಕ್ಕದ್ದು.

(2) ಅಧ್ಯಕ್ಷರ ಚುನಾವಣೆ ನಡೆಯುವ ಸಭೆಯ ಅಧ್ಯಕ್ಷತೆಯನ್ನು ಉಪಾಧ್ಯಕ್ಷರು ವಹಿಸತಕ್ಕದ್ದು.

ಪರಂತು, ಉಪಾಧ್ಯಕ್ಷರು ತಾವೇ ಚುನಾವಣೆಗೆ ನಿಂತಿದ್ದರೆ, ಅಥವಾ ಉಪಾಧ್ಯಕ್ಷರೇ ಇಲ್ಲದಿದ್ದರೆ, ಅಥವಾ ಅವರು ಗೈರುಹಾಜರಾಗಿದ್ದರೆ, ಅಲ್ಲಿ ಹಾಜರಿರುವ ಸದಸ್ಯರು ತಮ್ಮಲ್ಲಿಯೇ ಒಬ್ಬ ಅಭ್ಯರ್ಥಿಯಲ್ಲದ ವ್ಯಕ್ತಿಯನ್ನು ಸಭೆಯ ಅಧ್ಯಕ್ಷತೆ ವಹಿಸಲು ಆರಿಸಿಕೊಳ್ಳತಕ್ಕದ್ದು.

(3) ಉಪಾಧ್ಯಕ್ಷರ ಚುನಾವಣೆ ನಡೆಯುವ ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರು ವಹಿಸತಕ್ಕದ್ದು ಅಥವಾ ಅವರು ಗೈರು ಹಾಜರಾಗಿದ್ದರೆ, ಹಾಜರಿರುವ ಸದಸ್ಯರು ತಮ್ಮಲ್ಲಿಯೇ ಒಬ್ಬಅಭ್ಯರ್ಥಿಯಲ್ಲದ ವ್ಯಕ್ತಿಯನ್ನು ಸಭೆಯ ಅಧ್ಯಕ್ಷತೆ ವಹಿಸಿಕೊಳ್ಳಲು ಆರಿಸಿಕೊಳ್ಳತಕ್ಕದ್ದು.

(4) ಅಧ್ಯಕ್ಷ ಮತ್ತು ಸಂದರ್ಭಾನುಸಾರವಾಗಿ ಉಪಾಧ್ಯಕ್ಷ ಸ್ಥಾನದ ಚುನಾವಣೆಗೆ ನಿಲ್ಲುವ ಪ್ರತಿಯೊಬ್ಬ ಅಭ್ಯರ್ಥಿಯ ಹೆಸರನ್ನು ಯುಕ್ತವಾಗಿ ಪ್ರಸ್ತಾವಿಸತಕ್ಕದ್ದು ಮತ್ತು ಅನುಮೋದಿಸತಕ್ಕದ್ದು.

(5) ಯುಕ್ತವಾಗಿ ಪ್ರಸ್ತಾವಿಸಲಾದ ಮತ್ತು ಅನುಮೋದಿತರಾದ ಅಭ್ಯರ್ಥಿಗಳ ಹೆಸರುಗಳನ್ನು ಸಭೆಯ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಸದಸ್ಯರಿಗೆ ಓದಿ ಹೇಳತಕ್ಕದ್ದು ಮತ್ತು ಯಾರಾದರೂ ಅಭ್ಯರ್ಥಿಗಳು ಸ್ಪರ್ಧೆಯಿಂದ ಹಿಂದೆ ಸರಿಯುವರೇ ಎಂದು ಖಚಿತಪಡಿಸಿಕೊಳ್ಳತಕ್ಕದ್ದು. ತದನಂತರ ಅಧ್ಯಕ್ಷತೆ ವಹಿಸಿದ ವ್ಯಕ್ತಿ ಮತದಾನದಿಂದ ಹಿಂದೆ ಸರಿಯದ ಅಭ್ಯರ್ಥಿಗಳ ಹೆಸರುಗಳನ್ನು ಮಂಡಿಸಬೇಕು.

ಹೆಸರುಗಳನ್ನು ಪ್ರಸ್ತಾವಿಸಿದ ಮತ್ತು ಅನುಮೋದಿಸಿದ ಕ್ರಮದಲ್ಲಿಯೇ ಒಂದಾದ ನಂತರ ಒಂದರಂತೆ ಮಂಡಿಸತಕ್ಕದ್ದು ಮತ್ತು ಮತದಾನವು ಅಗತ್ಯವಿದ್ದರೆ ವಿಭಜನೆಯಿಂದ ನಿರ್ಣಯಿಸತಕ್ಕದ್ದು. ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಯಾವುದೇ ಹೆಸರನ್ನು ನಂತರದ ಹೆಸರನ್ನು ಮತಕ್ಕೆ ಹಾಕದೇ ಅನುಮೋದಿಸಿದರೆ, ಹಾಗೆ ಪ್ರಸ್ತಾವಿಸಿದ ಹಾಗೂ ಅನುಮೋದನೆಗೊಂಡ ಸದಸ್ಯನು ಅಧ್ಯಕ್ಷನಾಗಿ ಚುನಾಯಿತನಾಗಿದ್ದಾನೆ ಎಂದು ಘೋಷಿಸತಕ್ಕದ್ದು.

4. **ಕರ್ನಾಟಕ ವೈದ್ಯಕೀಯ ಮಂಡಳಿ ಮತ್ತು ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ರಾಜ್ಯ ಶಾಖೆಯ ಮತ್ತು ಭಾರತೀಯ ತರಬೇತಿ ಹೊಂದಿದ ದಾದಿಯರ ಸಂಘದ ಸದಸ್ಯರ ಚುನಾವಣೆ ಮತ್ತು ರಾಜ್ಯ ಸರ್ಕಾರದಿಂದ ಸದಸ್ಯರ ನಾಮನಿರ್ದೇಶನ,–** ಪ್ರಕರಣ 5ರ ಉಪ–ಪ್ರಕರಣ (1)ರಡಿಯಲ್ಲಿ ಸದಸ್ಯರ

ಪದಾವಧಿಯು ಮುಕ್ತಾಯವಾಗುವ ದಿನಾಂಕದ ಕನಿಷ್ಠ ಮೂರು ತಿಂಗಳು ಮುಂಚಿತವಾಗಿಯೇ (ಇನ್ನು ಮುಂದೆ ಮುಕ್ತಾಯದ ದಿನಾಂಕ ಎಂದು ಕರೆಯಲಾಗುವುದು) ರಿಜಿಸ್ಟ್ರಾರರವರು ಲಿಖಿತ ಸೂಚನೆಯನ್ನು ನೀಡತಕ್ಕದ್ದು;

(ಎ) ಕರ್ನಾಟಕ ವೈದ್ಯಕೀಯ ಪರಿಷತ್ತಿಗೆ ಒಬ್ಬ ವ್ಯಕ್ತಿಯನ್ನು ಮುಕ್ತಾಯದ ದಿನಾಂಕದ ಒಂದು ತಿಂಗಳಿಗೆ ಕಡಿಮೆಯಿಲ್ಲದ ದಿನಾಂಕದಂದು ಪ್ರಕರಣ 3ರ ಉಪ-ಪ್ರಕರಣ (2)ರ ಉಪ-ಖಂಡ (v)ರಡಿಯಲ್ಲಿ ಚುನಾಯಿಸತಕ್ಕದ್ದು.

(ಬಿ) ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕರಾಜ್ಯ ಶಾಖೆಗೆ ಒಬ್ಬ ವ್ಯಕ್ತಿಯನ್ನು ಮುಕ್ತಾಯದ ದಿನಾಂಕಕ್ಕಿಂತ ಒಂದು ತಿಂಗಳಿಗೆ ಕಡಿಮೆಯಿಲ್ಲದ ದಿನಾಂಕದಂದು ಪ್ರಕರಣ 3ರ ಉಪ-ಪ್ರಕರಣ (2)ರ ಉಪ-ಖಂಡ (v)ರಡಿಯಲ್ಲಿ ಚುನಾಯಿಸತಕ್ಕದ್ದು.

(ಸಿ) ಭಾರತದ ತರಬೇತಿ ಹೊಂದಿದ ದಾದಿಯರ ಕರ್ನಾಟಕ ರಾಜ್ಯ ಶಾಖೆಗೆ ಒಬ್ಬ ವ್ಯಕ್ತಿಯನ್ನು ಪ್ರಕರಣ 3ರ ಉಪ-ಪ್ರಕರಣ (2)ರ ಉಪ-ಖಂಡ (v)ರಡಿಯಲ್ಲಿ ಚುನಾಯಿಸತಕ್ಕದ್ದು; ಮತ್ತು

(ಡಿ) ಮುಕ್ತಾಯದ ಒಂದು ತಿಂಗಳು ಕಡಿಮೆಯಿಲ್ಲದ ದಿನಾಂಕದಂದು ಪ್ರಕರಣ 3ರ ಉಪ-ಪ್ರಕರಣ (2)ರಖಂಡ (ಸಿ)ರಡಿಯಲ್ಲಿ ಮೂವರು ವ್ಯಕ್ತಿಗಳನ್ನು ಮಾತ್ರ ನಿರ್ದೇಶಿಸುವಂತೆ ರಾಜ್ಯ ಸರ್ಕಾರವನ್ನುಕೋರಬೇಕು.

**5. ಇತರ ಮತಕ್ಷೇತ್ರಗಳಿಂದ ಸದಸ್ಯರ ಚುನಾವಣೆಯಾಗಬೇಕಾದ ವಿಧಾನ.–**

ಪ್ರಕರಣ 3ರ ಉಪ-ಪ್ರಕರಣ (2)ರಖಂಡ (ಬಿ)ಯ ಉಪ-ಖಂಡ (i)ರಲ್ಲಿ ಉಲ್ಲೇಖಿಸಲಾದ ಮತಕ್ಷೇತ್ರಗಳ ಮೂಲಕ ಚುನಾವಣೆ ನಡೆದ ಪಕ್ಷದಲ್ಲಿ ರಿಜಿಸ್ಟ್ರಾರರವರು ಅಧಿನಿಯಮದಡಿ ನಿರ್ವಹಿಸಲಾದ ರಿಜಿಸ್ಟರಿನಲ್ಲಿ ಚುನಾವಣೆ ನಡೆಯಬೇಕಾದ ವರ್ಷದ ಹಿಂದಿನ ವರ್ಷ ಡಿಸೆಂಬರ್ 31ರವರೆಗೆ ನಮೂದಾಗಿರುವ ವ್ಯಕ್ತಿಗಳ ಹೆಸರುಗಳ ಮತದಾರರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ಪ್ರಕರಣ 3ರ ಉಪ-ಪ್ರಕರಣ (2)ರಖಂಡ (ಬಿ) ಯ ಉಪ-ಖಂಡಗಳಾದ (ii) (iii) ಮತ್ತು (iv) ರಲ್ಲಿ ಉಲ್ಲೇಖಿಸಲಾದ ಮತಕ್ಷೇತ್ರಗಳಿಂದ ಪರಿಷತ್ತಿಗೆ ಚುನಾವಣೆ ನಡೆಯುವ ಪಕ್ಷದಲ್ಲಿ, ರಿಜಿಸ್ಟ್ರಾರರು ಮುಕ್ತಾಯದ ದಿನಾಂಕಕ್ಕಿಂತ ಕನಿಷ್ಠ ಪಕ್ಷ ನಾಲ್ಕು ತಿಂಗಳುಗಳ ಮುಂಚಿತವಾಗಿ ಅಂತಹ

ಪ್ರತೀ ಮತಕ್ಷೇತ್ರಕ್ಕೆ ಅಲ್ಲಿ ಮತದಾನ ಮಾಡಲು ಅರ್ಹರಾದ ಎಲ್ಲಾ ಮತದಾರರ ಪಟ್ಟಿಯನ್ನು ಹೊಂದಿರತಕ್ಕದ್ದು.

(3) ಸಂಯೋಜಿತ ಸಂಸ್ಥೆಗಳು (i) ಮುಖ್ಯಸ್ಥರು, (ii) ಮೇಟ್ರನ್ ಮತ್ತು ನರ್ಸಿಂಗ್ ಅಧೀಕ್ಷಕರು ಮತ್ತು (iii) ಸಿಸ್ಟರ್ ಮೇಟ್ರನ್‌ಗಳ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಾಗ, ಕೇವಲ ಅಂತಹ ಮುಖ್ಯಸ್ಥರು, ಮೇಟ್ರನ್ ಮತ್ತು ನರ್ಸಿಂಗ್ ಅಧೀಕ್ಷಕರು ಮತ್ತು ಸಿಸ್ಟರ್ ಟ್ಯೂಟರ್‌ಗಳ ಹೆಸರುಗಳನ್ನು ಅಂತಹ ಸಿದ್ಧಪಡಿಸುವಿಕೆಯ ದಿನಾಂಕದಂದು ಸಂಯೋಜಿತ ಸಂಸ್ಥೆಗಳ ಮುಖ್ಯಸ್ಥರು, ಮೇಟ್ರನ್ ಮತ್ತು ನರ್ಸಿಂಗ್ ಅಧೀಕ್ಷಕರು ಮತ್ತು ಸಿಸ್ಟರ್ ಟ್ಯೂಟರ್‌ಗಳೆಂದು ಮತದಾರರ ಪಟ್ಟಿಯಲ್ಲಿ ಸೇರಿಸತಕ್ಕದ್ದು ಮತ್ತು ಕೇವಲ ಅಂತಹ ಸಂಸ್ಥೆಗಳ ಖಾಯಂ ಮುಖ್ಯಸ್ಥರು, ಮೇಟ್ರನ್‌ಗಳು ಮತ್ತು ನರ್ಸಿಂಗ್ ಅಧೀಕ್ಷಕರು ಮತ್ತು ಸಿಸ್ಟರ್ ಟ್ಯೂಟರ್‌ಗಳ ಹೆಸರುಗಳನ್ನು ಸೇರಿಸತಕ್ಕದ್ದು ಮತ್ತು ಒಂದಕ್ಕಿಂತ ಹೆಚ್ಚು ಹೆಸರು ಯಾವುದೇ ಸಂಯೋಜಿತ ಸಂಸ್ಥೆಯ ಮುಖ್ಯಸ್ಥರೆಂದು ಕಂಡುಬರತಕ್ಕದ್ದಲ್ಲ.

(4) ಪ್ರಕರಣ 3ರ ಉಪ-ಪ್ರಕರಣ (2)ರಖಂಡ (ಬಿ)ಯು ಉಪ-ಖಂಡಗಳಾದ (ii) (iii) ಮತ್ತು (iv)ರಲ್ಲಿ ಉಲ್ಲೇಖಿಸಲಾದ ಅಂತಹ ಮತಕ್ಷೇತ್ರಗಳ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಮುಂಚೆ, ರಿಜಿಸ್ಟ್ರಾರನು ಸಂಯೋಜಿತ ಸಂಸ್ಥೆಯ ಕಾರ್ಯದರ್ಶಿ ಅಥವಾ ಸಂವಾದಿ ಪ್ರಾಧಿಕಾರವನ್ನು ಅಂತಹ ಕೋರಿಕೆ ಸಲ್ಲಿಸಿದ ಹದಿನೈದು ದಿನಗಳೊಳಗಾಗಿ ಈ ಮುಂದಿನ ಮಾಹಿತಿಯನ್ನು ಕಳುಹಿಸುವಂತೆ ಅಗತ್ಯಪಡಿಸಬಹುದು-

(ಎ) ಸಂಯೋಜಿತ ಸಂಸ್ಥೆಯ ಮುಖ್ಯಸ್ಥರ ಪೂರ್ಣ ಹೆಸರು ಮತ್ತು ವಿಳಾಸ:

(ಬಿ) ಸಂಯೋಜಿತ ಸಂಸ್ಥೆಗಳ ಮೇಟ್ರನ್‌ಗಳು ಮತ್ತು ನರ್ಸಿಂಗ್ ಅಧೀಕ್ಷಕರ ಹೆಸರು ಮತ್ತು ವಿಳಾಸ.

(ಸಿ) ಸಂಯೋಜಿತ ಸಂಸ್ಥೆಯ ಸಿಸ್ಟರ್ ಟ್ಯೂಟರ್‌ಗಳ ಮತ್ತು ಟ್ಯೂಟರ್‌ಗಳ ಪೂರ್ಣ ಹೆಸರು ಮತ್ತು ವಿಳಾಸ.

(5)ಮೇಲಿನ ಮಾಹಿತಿಯನ್ನು ಸ್ವೀಕರಿಸಿದ ನಂತರ ರಿಜಿಸ್ಟ್ರಾರನು ಮೇಲೆ ಹೇಳಿದ ಮತಕ್ಷೇತ್ರಗಳಿಗೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಪರಿಷತ್ತು ಈ ಕುರಿತಂತೆ ನಿರ್ದಿಷ್ಟಪಡಿಸಿದ

ದಿನಾಂಕದಂದು ಪರಿಷತ್ತಿನ ಕಛೇರಿಯಲ್ಲಿ ಪ್ರಕಟಿಸತಕ್ಕದ್ದು. ಸಂಯೋಜಿತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮ್ಯಾಟ್ರನಗಳ ಮತದಾರರ ಪಟ್ಟಿಯನ್ನು ಪ್ರತ್ಯೇಕವಾಗಿ ಸಿದ್ಧಪಡಿಸತಕ್ಕದ್ದು.

(6) ಈಗಾಗಲೇ ಸಿದ್ಧಪಡಿಸಿರುವ ಮತದಾರರ ಪಟ್ಟಿಯಲ್ಲಿ ಅಂತಹ ಹೆಸರುಗಳ ಸೇರ್ಪಡೆ ಅಥವಾ ತೆಗೆದುಹಾಕುವಿಕೆ ಅಗತ್ಯವೆಂದು ಅಥವಾ ಅರ್ಜಿಯಲ್ಲಿ ನಿರ್ದಿಷ್ಟಪಡಿಸಲಾದ ಈ ವಿಧಾನದಲ್ಲಿ ಹಾಗೇ ಪ್ರಕಟಿಸಲಾದ ಹೆಸರುಗಳಲ್ಲಿ ಯಾವುದೇ ಬದಲಾವಣೆ ಬೇಕೆಂದು ಸಮರ್ಪಕ ಸಾಕ್ಷ್ಯದ ಮೂಲಕ ಅಧ್ಯಕ್ಷರ ಗಮನಕ್ಕೆ ಬಂದರೆ, ಅವರು ಮತದಾರರ ಪಟ್ಟಿಗೆ ಹೆಸರುಗಳನ್ನು ಸೇರಿಸುವ ಅಥವಾ ತೆಗೆದುಹಾಕುವ ಮೂಲಕ ಮತದಾರರ ಪಟ್ಟಿಯನ್ನು ಸರಿಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

ಪರಂತು, ಈ ಬಗ್ಗೆ ಸಂಬಂಧಪಟ್ಟ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡದ ಹೊರತು, ಯಾವುದೇ ಹೆಸರನ್ನು ತೆಗೆದು ಹಾಕತಕ್ಕದ್ದಲ್ಲ. ಯಾವುದೇ ಮತದಾರರ ಪಟ್ಟಿಯನ್ನು ತಿದ್ದುಪಡಿ ಮಾಡಿದರೆ, ತಿದ್ದುಪಡಿಯೊಂದಿಗಿನ ಮತದಾರರ ಪಟ್ಟಿ ಈ ಅಧಿನಿಯಮದಡಿ ಚುನಾವಣೆಯ ಉದ್ದೇಶಕ್ಕಾಗಿ ಮತದಾರರ ಪಟ್ಟಿಯಾಗಬೇಕು. ಮತದಾರರ ಪಟ್ಟಿಯ ಪ್ರತಿಗಳು ಪರಿಷತ್ತು ನಿಗದಿಪಡಿಸುವ ಬೆಲೆಯಲ್ಲಿ ಪರಿಷತ್ತಿನ ಕಛೇರಿಯಲ್ಲಿ ಮಾರಾಟಕ್ಕೆ ಲಭ್ಯವಿರಬೇಕು.

(7) ಈ ಅಧಿನಿಯಮದಡಿ ನಡೆಯುವ ಪ್ರತಿಯೊಂದು ಚುನಾವಣೆಗೆ ರಿಜಿಸ್ಟ್ರಾರ್ ಅಥವಾ ಈ ಬಗ್ಗೆ ಅಧ್ಯಕ್ಷರು ಅಧಿಕೃತಗೊಳಿಸುವ ಯಾರೇ ಇತರ ವ್ಯಕ್ತಿ ಚುನಾವಣಾಧಿಕಾರಿಯಾಗಿರತಕ್ಕದ್ದು.

(8) ಚುನಾವಣಾಧಿಕಾರಿಯು ಕರ್ನಾಟಕರಾಜ್ಯಪತ್ರದಲ್ಲಿ, ಪರಿಷತ್ತಿನ ಸೂಚನಾ ಫಲಕದಲ್ಲಿ, ಚುನಾವಣೆಯ ಈ ಮುಂದಿನ ಪ್ರತೀ ಹಂತಗಳನ್ನು ದಿನಾಂಕವನ್ನು ಅಧಿಸೂಚಿಸತಕ್ಕದ್ದು, ಎಂದರೆ:–

(ಎ) ಮತಎಣಿಕೆಗೆ ನಿಗದಿಪಡಿಸಿದ ದಿನಾಂಕಕ್ಕಿಂತ ಮುಂಚೆ ಅರವತ್ತು ದಿನಗಳ ನಂತರದಲ್ಲದ ದಿನಾಂಕವಾಗಿರಬೇಕಾದ ನಾಮನಿರ್ದೇಶನ ಸಲ್ಲಿಸುವ ಕೊನೆಯ ದಿನಾಂಕ;

(ಬಿ) ನಾಮನಿರ್ದೇಶನ ಮಾಡುವ ಕೊನೆಯ ದಿನವಾಗಿರುವ, ನಾಮನಿರ್ದೇಶನ ಮಾಡುವ ದಿನಾಂಕದಿಂದ ಮೂರನೆಯ ಅಥವಾ ನಾಲ್ಕನೆಯ ದಿನವಾಗಿ ಬರುವ ಮತ್ತು ಆ ಉದ್ದೇಶಕ್ಕಾಗಿ ಮೊದಲ ದಿನವಾಗಿರತಕ್ಕ ನಾಮನಿರ್ದೇಶನಗಳನ್ನು ಪರಿಶೀಲನೆ ಮಾಡುವ ದಿನಾಂಕ.

(ಸಿ) ನಾಮ ನಿರ್ದೇಶನಗಳನ್ನು ಪರಿಶೀಲನೆ ಮಾಡುವ ದಿನಾಂಕದಿಂದ ಮೂರನೆಯ ಅಥವಾ ನಾಲ್ಕನೆಯ ದಿನವಾಗಿರತಕ್ಕ ಉಮೇದುವಾರಿಕೆಯನ್ನು ಹಿಂಪಡೆಯುವ ಕೊನೆಯ ದಿನಾಂಕ;

(ಡಿ) ಮತದಾನ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ;

(ಇ) ಮತಗಳನ್ನು ಎಣಿಕೆ ಮಾಡುವ ದಿನಾಂಕ.

(9) ಉಪ–ನಿಯಮ (1) ಮತ್ತು (2) ರಡಿಯಲ್ಲಿ ಸಿದ್ಧಪಡಿಸಲಾದ ಮತ್ತು ಪ್ರಕಟಗೊಂಡ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಪ್ರತಿಯೊಬ್ಬ ವ್ಯಕ್ತಿಯು ಪ್ರಕರಣ 8 ರಡಿ ಅನರ್ಹಗೊಳ್ಳದ ಹೊರತಾಗಿ, ಆ ಮತದಾರರ ಪಟ್ಟಿಯು ಸಂಬಂಧಪಟ್ಟಿರುವ ಮತಕ್ಷೇತ್ರದಿಂದ ಪ್ರಕರಣ 3ರ ಉಪ–ಪ್ರಕರಣ (2)ರಖಂಡ (ಬಿ) ರಡಿ ಸದಸ್ಯರಾಗಿ ಚುನಾಯಿತರಾಗಲು ಅರ್ಹನಾಗಿರತಕ್ಕದ್ದು.

(10) ಪ್ರಕರಣ 3ರ ಉಪ–ಪ್ರಕರಣ (2) ರಖಂಡ (ಬಿ) ರಡಿ ಚುನಾಯಿತರಾಗಬೇಕಾದ ಪ್ರತಿಯೊಬ್ಬ ಅಭ್ಯರ್ಥಿಯು ಸಂಬಂಧಪಟ್ಟ ಮತಕ್ಷೇತ್ರಕ್ಕಾಗಿ ಉಪ–ನಿಯಮ (1) ಮತ್ತು (2) ರಡಿಯಲ್ಲಿ ಸಿದ್ಧಪಡಿಸಲಾದ ಮತ್ತು ಪ್ರಕಟಿಸಲಾದ ಮತದಾರರ ಪಟ್ಟಿಯಲ್ಲಿ ಹೆಸರುಗಳನ್ನು ನಮೂದಿಸಲಾಗಿರುವ ವ್ಯಕ್ತಿಗಳಿಂದ ಪ್ರಸ್ತಾವಿಸಲ್ಪಡತಕ್ಕದ್ದು ಮತ್ತು ಅನುಮೋದಿಸಲ್ಪಡತಕ್ಕದ್ದು.

(11) ನಾಮ ನಿರ್ದೇಶನದ ಪತ್ರಗಳು ಅನುಬಂಧ–I ರಲ್ಲಿನ ನಮೂನೆ 'ಎ' ಯಲ್ಲಿರತಕ್ಕದ್ದು. ಯಾರೇ ಮತದಾರನು ಖಾಲಿಸ್ಥಾನ ಅಥವಾ ಖಾಲಿ ಸ್ಥಾನಗಳನ್ನು ತುಂಬಲು ಅವಶ್ಯವಾದ ಅಭ್ಯರ್ಥಿಗಳಿಗಿಂತ ಹೆಚ್ಚು ನಾಮನಿರ್ದೇಶನವನ್ನು ಪ್ರಸ್ತಾವಿಸಬಾರದು ಮತ್ತು ಅನುಮೋದಿಸಬಾರದು.

(12) ಸ್ಥಾನ ಅಥವಾ ಸ್ಥಾನಗಳನ್ನು ತುಂಬಲು ಅವಶ್ಯವಾದುದಕ್ಕಿಂತ ನಾಮನಿರ್ದೇಶನಗಳು ಹೆಚ್ಚಿದ್ದರೆ, ಅದೇ ಮತದಾರರ ಪಟ್ಟಿಯಿಂದ ನಾಮನಿರ್ದೇಶನ ಮಾಡಿದ, ಅದೇ ವ್ಯಕ್ತಿರುಜು ಹಾಕಿದ ನಾಮನಿರ್ದೇಶನಗಳು ಅಸಿಂಧುವಾಗತಕ್ಕದ್ದು.

(13) ಅಭ್ಯರ್ಥಿಯು ತಾನು ಚುನಾಯಿತನಾದರೆ ಪರಿಷತ್ತಿನ ಸೇವೆ ಮಾಡುವುದಾಗಿ ನಾಮನಿರ್ದೇಶನ ಪತ್ರದಲ್ಲಿನ ಘೋಷಣೆಗೆ ಸಹಿ ಹಾಕತಕ್ಕದ್ದು. ಇಂತಹ ಘೋಷಣೆಯಿರದಿದ್ದ ಪಕ್ಷದಲ್ಲಿ, ನಾಮ ನಿರ್ದೇಶನವನ್ನು ಅಸಿಂಧುವೆಂದು ಪರಿಗಣಿಸತಕ್ಕದ್ದು.

(14) ಅಭ್ಯರ್ಥಿಯು ಚುನಾವಣಾಧಿಕಾರಿಗೆ ಯುಕ್ತವಾಗಿ ಸಹಿ ಮಾಡಿದ ಮತ್ತು ಪೂರ್ಣವಾಗಿರುವ ನಾಮ ನಿರ್ದೇಶನವನ್ನು ಅಂಚೆಯಲ್ಲಿ ಅಥವಾ ಅನ್ಯಥಾ ನಾಮ ನಿರ್ದೇಶನಕ್ಕೆ ನಿಗದಿಯಾಗಿರುವ ಕೊನೆಯ ದಿನಾಂಕಕ್ಕಿಂತ ಮೊದಲು ಅಥವಾ ಕೊನೆಯ ದಿನಾಂಕದಂದು ಅಪರಾಹ್ನ 12 ಗಂಟೆಯವರೆಗೆ ತಲುಪುವಂತೆ ಕಳುಹಿಸತಕ್ಕದ್ದು. ನಾಮನಿರ್ದೇಶನ ಪತ್ರವನ್ನು ಸ್ವೀಕರಿಸಿದ ಮೇಲೆ, ಚುನಾವಣಾಧಿಕಾರಿಯು ಕೂಡಲೇ ಅದರ ಮೇಲೆ ಅದನ್ನು ಸ್ವೀಕರಿಸಿದ ದಿನಾಂಕ ಮತ್ತು ಸಮಯವನ್ನು ನಮೂದಿಸತಕ್ಕದ್ದು. ಮೇಲೆ ಹೇಳಲಾದ ದಿನಾಂಕ ಮತ್ತು ಸಮಯದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಚುನಾವಣಾಧಿಕಾರಿ ಸ್ವೀಕರಿಸದ ಯಾವುದೇ ನಾಮನಿರ್ದೇಶನ ಪತ್ರವನ್ನು ತಿರಸ್ಕರಿಸತಕ್ಕದ್ದು.

(15) (i) ಪ್ರತಿಯೊಬ್ಬ ಅಭ್ಯರ್ಥಿಯ, ನಾಮನಿರ್ದೇಶನ ಪತ್ರದೊಂದಿಗೆ ಚುನಾವಣಾಧಿಕಾರಿಯಲ್ಲಿ ಐವತ್ತು ರೂಪಾಯಿಗಳ ನಗದನ್ನು ಠೇವಣಿ ಇಡತಕ್ಕದ್ದು. ಅಂತಹ ಠೇವಣಿಯಿಲ್ಲದ ನಾಮನಿರ್ದೇಶನ ಪತ್ರವನ್ನು ಚುನಾವಣಾಧಿಕಾರಿಯು ಅಂಗೀಕರಿಸತಕ್ಕದ್ದಲ್ಲ. ಒಂದು ವೇಳೆ –

(ಎ) ಅಭ್ಯರ್ಥಿಯು ಚುನಾಯಿತರಾದರೆಂದು ಘೋಷಿಸಲ್ಪಟ್ಟರೆ ಅಥವಾ ಹಾಗೆಂದು ಭಾವಿಸಿದರೆ, ಅಥವಾ

(ಬಿ) ಅಭ್ಯರ್ಥಿಯ ನಾಮನಿರ್ದೇಶನವು ಅಸಿಂಧುವೆಂದು ಘೋಷಿಸಲ್ಪಟ್ಟರೆ, ಅಥವಾ

(ಸಿ) ಅಭ್ಯರ್ಥಿಯು ನಾಮನಿರ್ದೇಶನ ಪತ್ರಗಳ ಪರಿಶೀಲನೆಯಾದ ನಂತರ ಮತ್ತು ಚುನಾವಣೆ ಮುಗಿಯುವ ಮೊದಲೇ ಮೃತಪಟ್ಟರೆ, ಅಥವಾ

(ಡಿ) ಅಭ್ಯರ್ಥಿಯು ಚುನಾಯಿತರಾಗಲು ವಿಫಲರಾದರೆ ಆದರೆ ಖಂಡ (ii)ರಲ್ಲಿ ನಿರ್ದಿಷ್ಟಪಡಿಸಲಾದ ಸಂಖ್ಯೆಗಿಂತ ಹೆಚ್ಚಿನ ಸಿಂಧುವಾದ ಮತಗಳನ್ನು ಪಡೆದಿದ್ದರೆ,–

ಠೇವಣಿಯನ್ನು ಹಿಂದಿರುಗಿಸತಕ್ಕದ್ದು.

(ii) ಅಭ್ಯರ್ಥಿಯು ಚುನಾಯಿತನಾಗದಿದ್ದರೆ ಮತ್ತು ಇರುವ ಮತಗಳು ನಮೂದಾದ ಒಟ್ಟು ಮತಗಳ 1/8 ಮತಗಳು ಅವರ ಪರವಾಗಿ ಕಡಿಮೆಯಿದ್ದರೆ ಅಥವಾ ಚುನಾಯಿತರಾಗಬೇಕಾದ ಸದಸ್ಯರ ಒಟ್ಟು ಸಂಖ್ಯೆಯ ಎರಡು ಅಥವಾ ಅದಕ್ಕಿಂತ ಹೆಚ್ಚಿದ್ದು, ಚುನಾಯಿತರಾಗಬೇಕಾದ ಸದಸ್ಯರ ಒಟ್ಟು

ಸಂಖ್ಯೆಯಿಂದ ಒಟ್ಟು ಸಂಖ್ಯೆಯ ಮತಗಳನ್ನು ಭಾಗಿಸಿದರೆ ಬರುವ ಸಂಖ್ಯೆಯು 1/8 ರಷ್ಟಿದ್ದರೆ, ಠೇವಣಿಯನ್ನು ಪರಿಷತ್ತಿಗೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

(iii) ಮುಟ್ಟುಗೋಲು ಹಾಕಿಕೊಳ್ಳದಿದ್ದರೆ, ಠೇವಣಿಯನ್ನು ಚುನಾವಣೆಯ ಫಲಿತಾಂಶ ಘೋಷಣೆಯಾದ ನಂತರ ಸಾಧ್ಯವಾದಷ್ಟು ಬೇಗನೇ ಹಿಂತಿರುಗಿಸತಕ್ಕದ್ದು.

(16) ನಾಮನಿರ್ದೇಶನ ಪತ್ರಗಳನ್ನು ಪರಿಶೀಲನೆ ಮಾಡಲು ನಿಗದಿಪಡಿಸಿದ ದಿನಾಂಕದಂದು, ಚುನಾವಣಾಧಿಕಾರಿಯು ಈ ಬಗ್ಗೆ ಗೊತ್ತುಪಡಿಸಿದ ಸ್ಥಳದಲ್ಲಿ ಅಪರಾಹ್ನ 12 ಗಂಟೆಗೆ ತಾನು ಸ್ವೀಕರಿಸಿದ ನಾಮನಿರ್ದೇಶನ ಪತ್ರಗಳನ್ನು ಪರಿಶೀಲನೆ ಮಾಡತಕ್ಕದ್ದು. ಪರಿಶೀಲನೆಯ ಸಂದರ್ಭದಲ್ಲಿ ಯಾರೇ ಅಭ್ಯರ್ಥಿ ತಾನೇ ಖುದ್ದಾಗಿ ಅಥವಾ ಆತನು ಅಧಿಕೃತಗೊಳಿಸಿದ ಪ್ರತಿನಿಧಿಯು ಹಾಜರಿರಬಹುದು. ನಾಮನಿರ್ದೇಶನಗಳನ್ನು ಪರಿಶೀಲಿಸಿದ ನಂತರ ಮತ್ತು ಉಪ–ನಿಯಮ (17) ರಡಿ, ಅಭ್ಯರ್ಥಿಯು ತನ್ನ ಉಮೇದುವಾರಿಕೆಯನ್ನು ಹಿಂಪಡೆಯುವ ಅವಧಿಯು ಮುಕ್ತಾಯವಾದ ನಂತರ, ಚುನಾವಣಾಧಿಕಾರಿಯು ತಾನು ಸಿಂಧುವೆಂದು ಪರಿಗಣಿಸಿದ ನಾಮನಿರ್ದೇಶನಗಳ ಅಭ್ಯರ್ಥಿಗಳ ಹೆಸರುಗಳನ್ನು ಕೂಡಲೇ ಘೋಷಿಸತಕ್ಕದ್ದು.

(17) ಯಾರೇ ಅಭ್ಯರ್ಥಿಯ ಲಿಖಿತದಲ್ಲಿ ತಾನು ಸಹಿ ಮಾಡಿರುವ ಸೂಚನೆಯನ್ನು ಹಿಂಪಡೆಯುವಿಕೆಗೆ ನಿಗದಿಯಾಗಿರುವ ದಿನದಂದು ಅಪರಾಹ್ನ 12 ಗಂಟೆಗೆ ಮೀರದಂತೆ ಚುನಾವಣಾಧಿಕಾರಿಗೆ ಕಳುಹಿಸುವ ಮೂಲಕ ತನ್ನಉಮೇದುವಾರಿಕೆಯನ್ನು ಹಿಂಪಡೆಯಬಹುದು.

(18) ತಾನು ಸ್ವೀಕರಿಸಿದ ನಾಮನಿರ್ದೇಶನ ಪತ್ರಗಳನ್ನು ಪರಿಶೀಲಿಸಿದ ನಂತರ, ಸಿಂಧುವಾದ ನಾಮನಿರ್ದೇಶನಗಳ ಸಂಖ್ಯೆಯು ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಗೆ ಸಮನಾಗಿವೆ ಎಂದು ಚುನಾವಣಾಧಿಕಾರಿಗೆ ಕಂಡು ಬಂದರೆ, ಆತನು ಕೂಡಲೇ ಎಲ್ಲಾ ಅಂತಹ ಅಭ್ಯರ್ಥಿಗಳು ಆ ಸ್ಥಾನಗಳನ್ನು ತುಂಬಲು ಚುನಾಯಿತರಾಗಬೇಕೆಂದು ಘೋಷಿಸತಕ್ಕದ್ದು.

(19) ಸಿಂಧುವಾದ ನಾಮನಿರ್ದೇಶನಗಳ ಸಂಖ್ಯೆಯು ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಗಿಂತ ಹೆಚ್ಚಾಗಿದ್ದರೆ, ಪರಿಷತ್ತು ಸರಿಯೆಂದು ಭಾವಿಸಿದ ವಿಧಾನದಲ್ಲಿ ಚುನಾವಣಾಧಿಕಾರಿಯು ಅವರುಗಳ ಹೆಸರುಗಳನ್ನು ಮತ್ತು ವಿಳಾಸಗಳನ್ನು ಕೂಡಲೇ ಘೋಷಿಸತಕ್ಕದ್ದು ಮತ್ತು ನಂತರ ಅನುಸೂಚಿ I ರ ನಮೂನೆ ಬಿ ಯ ಮತ ಪತ್ರಗಳಲ್ಲಿ ಅವರ ಹೆಸರುಗಳನ್ನು ನಮೂದಿಸತಕ್ಕದ್ದು.

(20) ಅಭ್ಯರ್ಥಿಗಳನ್ನು ಸಿಂಧುವಾದ ರೀತಿಯಾದ ನಾಮನಿರ್ದೇಶನ ಮಾಡಿದ ನಂತರ, ಚುನಾವಣಾಧಿಕಾರಿಯು ಪ್ರತಿಯೊಬ್ಬ ಮತದಾರನಿಗೆ, (i) ಮತ ಪತ್ರ (ii) "ಮತ ಪತ್ರಗಳು" ಎಂದು ಬರೆದಿರುವ ಚಿಕ್ಕ ಖಾಲಿ ಕವರ್; ಮತ್ತು (iii) ಎಡ ಮೇಲ್ಭಾಗದಲ್ಲಿ ಕ್ರಮ ಅಕಾರಾದಿ ಸಂಖ್ಯೆ ಮತ್ತು ಎಡ ಕೆಳಭಾಗದಲ್ಲಿ ಹೆಸರು ಮತ್ತು ಸಹಿಗಳ ಕಾಲಂಗಳು ಇರುವ ಒಂದು ದೊಡ್ಡ ಕವರ್ ಮತ್ತು ಮಧ್ಯಭಾಗದಲ್ಲಿ ಚುನಾವಣಾಧಿಕಾರಿಯ ವಿಳಾಸವನ್ನು ಈ ಕೆಳಗಿನಂತೆ ಮುದ್ರಿಸಿರತಕ್ಕದ್ದು.

"ಗೆ,

ಚುನಾವಣಾಧಿಕಾರಿ,

C/o ಕರ್ನಾಟಕ ದಾದಿಯರ ಪರಿಷತ್ತು,

ಬೆಂಗಳೂರು."

(21) ಉಪ-ನಿಯಮ (2)ರಲ್ಲಿ ಉಪಬಂಧಿಸಲಾದಂತೆ ಮತಪತ್ರ ಮತ್ತು ಸಂಬಂಧಪಟ್ಟ ಪತ್ರಗಳನ್ನು ಸ್ವೀಕರಿಸದ ಅಥವಾ ಚುನಾವಣಾಧಿಕಾರಿಗೆ ಹಿಂದಿರುಗಿಸುವ ಮೊದಲು ಯಾರ ಮತಪತ್ರಗಳು ಅಲಕ್ಷ್ಯದಿಂದ ಅವುಗಳನ್ನು ಅನುಕೂಲಕರವಾಗಿ ಉಪಯೋಗಿಸಲು ಸಾಧ್ಯವಾಗದ ರೀತಿಯಲ್ಲಿ ಹಾಳಾಗಿವೆಯೋ ಅಥವಾ ಯಾರು ತಮ್ಮ ಪತ್ರಗಳನ್ನು ಕಳೆದುಕೊಂಡಿರುವರೋ ಆ ಮತದಾರ ಚುನಾವಣಾಧಿಕಾರಿಗೆ ಹಾಗೆಂದು ತಾನು ಸಹಿ ಹಾಕಿದ ಘೋಷಣೆಯನ್ನು ರವಾನಿಸಿ, ತಾನು ಸ್ವೀಕರಿಸದ, ಅಥವಾ ಕಳೆದ ಪತ್ರಗಳ ಬದಲಾಗಿ ನಕಲು ಪತ್ರಗಳನ್ನು ಕಳುಹಿಸುವಂತೆ ಅಥವಾ ಪತ್ರಗಳು ಹಾಳಾಗಿದ್ದರೆ, ಅದನ್ನು ಚುನಾವಣಾಧಿಕಾರಿಗೆ ಕಳುಹಿಸಬಹುದು ಅದನ್ನು ಅವರು ರದ್ದುಪಡಿಸತಕ್ಕದ್ದು. ಪ್ರತಿಯೊಂದು ನಕಲು ಪತ್ರಗಳನ್ನು ನೀಡಿದ ಪ್ರಕರಣದಲ್ಲಿ, ಚುನಾವಣಾಧಿಕಾರಿಯು ಅದರ ವರದಿಯನ್ನು ಇಡತಕ್ಕದ್ದು ಮತ್ತು ಮತದಾರರಿಗೆ ಮೂಲತಃ ಕಳುಹಿಸಿದ್ದ ದೊಡ್ಡ ಕವರ್‌ನ ಮೇಲೆ ಕ್ರಮ ಅಕಾರಾದಿ ಸಂಖ್ಯೆಯನ್ನು ಬರೆದು "ನಕಲು" ಎಂಬ ಗುರುತನ್ನು ಹಾಕತಕ್ಕದ್ದು. ಇಂತಹ ಪ್ರಕರಣಗಳಲ್ಲಿ ನೀಡಿದ ಮತಪತ್ರಗಳ ಮೇಲೆ ಸಹ "ನಕಲು" ಎಂದು ಬರೆದುಗುರುತಿಸತಕ್ಕದ್ದು.

(22) ಮತದಾನ ಮಾಡಲು ಇಚ್ಛಿಸುವ ಪ್ರತಿಯೊಬ್ಬ ಮತದಾರನು, ತನ್ನ ಮತಪತ್ರವನ್ನು ಚುನಾವಣಾಧಿಕಾರಿಗೆ ಮತಪತ್ರಗಳನ್ನು ಸ್ವೀಕರಿಸಲು ನಿಗದಿಪಡಿಸಿರುವ ಸಮಯಕ್ಕೆ ಮುಂಚಿತವಾಗಿ ಕಳುಹಿಸತಕ್ಕದ್ದು. ಮತಗಳನ್ನು ಪ್ರಕರಣ 11ರಲ್ಲಿ ವಿವರಿಸಲಾದಂತೆ ಮತದಾನ ಹಂಚಿಕೆ ಪದ್ಧತಿಯಲ್ಲಿ

ನೀಡತಕ್ಕದ್ದು. ಚುನಾವಣಾಧಿಕಾರಿಯು ಸಂಗ್ರಹಿಸಿದ ಮತಪತ್ರಗಳನ್ನು ಸೀಲು ಹಾಕಿದ ಪೆಟ್ಟಿಗೆಗಳಲ್ಲಿ ಇರಿಸತಕ್ಕದ್ದು.

ಪರಂತು, ಹಾಗೆ ನಿಗದಿಪಡಿಸಿದ ಸಮಯಕ್ಕಿಂತ ಮುಂಚೆ ಚುನಾವಣಾಧಿಕಾರಿಯು ಸ್ವೀಕರಿಸದ ಯಾವುದೇ ಮತಪತ್ರವನ್ನುತಿರಸ್ಕರಿಸತಕ್ಕದ್ದು.

(23) ಚುನಾವಣಾಧಿಕಾರಿಯು ತನಗೆ ಸರಿಯೆನಿಸಿದಂತಹ ನಾಲ್ಕು ಜನರನ್ನು ಮೀರದಂತೆ ಪರಿಷತ್ತಿನ ಅಂತಹ ಸಂಖ್ಯೆಯ ಸದಸ್ಯರನ್ನು ಸೂಕ್ಷ್ಮಪರಿಶೀಲಕರಾಗಿ ನಾಮನಿರ್ದೇಶಿಸತಕ್ಕದ್ದು.

(24) ಮತ ಎಣಿಕೆಯ ಸಂದರ್ಭದಲ್ಲಿ ಯಾರೇ ಅಭ್ಯರ್ಥಿಯು ತಾನೇಖುದ್ದಾಗಿ ಹಾಜರಿರಬಹುದು ಅಥವಾ ಆತನ ಅಧಿಕೃತ ಪ್ರತಿನಿಧಿ ಹಾಜರಿರಬಹುದು.

(25) ಮತಎಣಿಕೆಯು ಮುಗಿದ ನಂತರ, ಚುನಾವಣಾಧಿಕಾರಿಯು ಕೂಡಲೇ ಹೆಚ್ಚು ಮತಗಳನ್ನು ಪಡೆದ ಅಭ್ಯರ್ಥಿ ಅಥವಾ ಸಂದರ್ಭಾನುಸಾರವಾಗಿ ಅಭ್ಯರ್ಥಿಗಳನ್ನು ಚುನಾಯಿತರಾಗಿದ್ದಾರೆಂದು ಘೋಷಿಸತಕ್ಕದ್ದು ಮತ್ತು ಕೂಡಲೇ ಪರಿಷತ್ತಿಗೆ ಹಾಗೇ ಚುನಾಯಿತರಾಗಿದ್ದಾರೆಂದು ತನ್ನ ಪತ್ರದ ಮೂಲಕ ಯಶಸ್ವಿ ಅಭ್ಯರ್ಥಿಗೆ ತಿಳಿಸತಕ್ಕದ್ದು.

(26) ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳ ನಡುವೆ ಸಮನಾದ ಮತಗಳು ಕಂಡು ಬಂದಾಗ ಮತ್ತು ಪೂರಕವಾಗಿ ಸೇರಿಸುವ ಒಂದು ಮತ ಯಾರೇ ಒಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳನ್ನು ಚುನಾಯಿತರೆಂದು ಘೋಷಿಸಬಹುದು ಎಂದಾಗ, ಚುನಾವಣಾಧಿಕಾರಿಯು ತಾನು ನಿರ್ಧರಿಸತಕ್ಕ ಅಂತಹ ವಿಧಾನದಲ್ಲಿ ಚೀಟಿ ಎತ್ತುವ ಮೂಲಕ ಅಂತಹ ಪೂರಕ ಮತವನ್ನು ಯಾವ ಅಭ್ಯರ್ಥಿಗೆ ಅಥವಾ ಅಭ್ಯರ್ಥಿಗಳಿಗೆ ನೀಡಿದೆ ಎಂದು ಭಾವಿಸತಕ್ಕದ್ದು.

(27) ಚುನಾವಣಾಧಿಕಾರಿಯು ಚುನಾವಣೆಯ ಫಲಿತಾಂಶ ಪ್ರಕಟಣೆ ಮಾಡಿದ ನಂತರ, ಮತಪತ್ರಗಳು ಮತ್ತು ಚುನಾವಣೆಗೆ ಸಂಬಂಧಿಸಿದ ಇತರ ದಾಖಲಾತಿಗಳನ್ನು ಮೊಹರು ಹಾಕತಕ್ಕದ್ದು ಮತ್ತು ಅದನ್ನು ಆರು ತಿಂಗಳುಗಳ ಅವಧಿಯವರೆಗೆ ತನ್ನ ಸುರಕ್ಷಾ ಅಭಿರಕ್ಷೆಯಲ್ಲಿರಿಸಿಕೊಳ್ಳತಕ್ಕದ್ದು; ಮತ್ತು ತದನಂತರ ಅವುಗಳನ್ನು ನಾಶಪಡಿಸತಕ್ಕದ್ದು.

(28) ಚುನಾವಣೆಯ ಫಲಿತಾಂಶ ಪ್ರಕಟಣೆಯ ನಂತರ ಮತ್ತು ಚುನಾವಣಾಧಿಕಾರಿ ಅಂತಹ ಚುನಾವಣೆಯ ಫಲಿತಾಂಶವನ್ನು ಸ್ವೀಕರಿಸಿದ ನಂತರ, ಅಧ್ಯಕ್ಷರು ಅಂತಹ ಫಲಿತಾಂಶವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವ ಸಲುವಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(29) (i) ಯಾರೇಅಭ್ಯರ್ಥಿಯು ಯಾವುದೇ ಚುನಾವಣೆಯ ಸಿಂಧುತ್ವವನ್ನು ಪ್ರಶ್ನಿಸಿ ಚುನಾವಣಾ ಪಿಟಿಷನ್‌ಅನ್ನು ಚುನಾವಣಾಧಿಕಾರಿಗೆ ಕರ್ನಾಟಕರಾಜ್ಯಪತ್ರದಲ್ಲಿ ಉಪ-ನಿಯಮ (28)ರಡಿಯಲ್ಲಿ ಫಲಿತಾಂಶಗಳನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಆ ಚುನಾವಣಾ ಪಿಟಿಷನ್-

(ಎ) ಪಿಟಿಷನ್‌ನಲ್ಲಿ ನಮೂದಿಸಿರುವ ಪ್ರತಿವಾದಿಗಳ ಸಂಖ್ಯೆಗೆ ಸಮನಾದ ಪ್ರತಿಗಳಿರತಕ್ಕದ್ದು ಮತ್ತು ಅಂತಹ ಪ್ರತಿಯೊಂದು ಪ್ರತಿಯನ್ನು ಪಿಟಿಷನ್‌ನ ನೈಜ ಪ್ರತಿ ಎಂದು ಅರ್ಜಿದಾರ ತನ್ನ ಸಹಿಯನ್ನು ಹಾಕಿ ದೃಢೀಕರಿಸಿರತಕ್ಕದ್ದು;

(ಬಿ) ಅರ್ಜಿದಾರರು ಉತ್ತರಿಸುವ ಮುಖ್ಯ ಸಂಗತಿಗಳ ಸಂಕ್ಷಿಪ್ತ ನಿರೂಪಣೆಯನ್ನು ಒಳಗೊಂಡಿರತಕ್ಕದ್ದು;

(ಸಿ) ಅದಕ್ಕೆ ಅರ್ಜಿದಾರನು ಸಹಿ ಹಾಕಿ, ವಾದಪ್ರತಿವಾದ ಪತ್ರಗಳ ಸತ್ಯಾಪನೆಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರಅಧಿನಿಯಮ ಸಂಖ್ಯೆ 5)ರಲ್ಲಿ ತಿಳಿಸಲಾದಂತಹ ವಿಧಾನದಲ್ಲಿ ಪರಿಶೀಲನೆ ಮಾಡತಕ್ಕದ್ದು.

(ii) ಅರ್ಜಿಯೊಂದಿಗಿನ ಯಾವುದೇ ಅನುಸೂಚಿ ಅಥವಾ ಅನುಬಂಧಕ್ಕೆ ಸಹ ಅರ್ಜಿಯ ವಿಧಾನದಲ್ಲಿಯೇ ಅರ್ಜಿದಾರನು ಸಹಿ ಹಾಕತಕ್ಕದ್ದು ಮತ್ತು ಪರಿಶೀಲಿಸತಕ್ಕದ್ದು.

(iii) ಅರ್ಜಿದಾರನು ಚುನಾಯಿತ ಅಭ್ಯರ್ಥಿಯ ಚುನಾವಣೆ ಶೂನ್ಯ ಎಂದು ಘೋಷಣೆಯನ್ನು ಕ್ಲೇಮು ಮಾಡಿದರೆ ಮತ್ತು ಮುಂದುವರೆದು ಅರ್ಜಿದಾರರನ್ನು ಹೊರತುಪಡಿಸಿ ಇತರ ಎಲ್ಲಾ ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ತಾನೇಅಥವಾ ಇತರ ಯಾರೇ ಅಭ್ಯರ್ಥಿಯು ಯುಕ್ತವಾಗಿ ಚುನಾಯಿತನಾಗಿದ್ದಾನೆಂದು ಕ್ಲೇಮು ಮಾಡಿದರೆ, ಮತ್ತು ಯಾವಾಗ ಅಂತಹ ಯಾವುದೇ ಮುಂದುವರೆದ ಘೋಷಣೆಯನ್ನು ಚುನಾಯಿತ ಅಭ್ಯರ್ಥಿಯನ್ನು

ಕ್ಲೇಮು ಮಾಡಿದರೆ, ಆಗ ತನ್ನ ಅರ್ಜಿಗೆ ತಾನೇ ಪ್ರತಿವಾದಿಯಾಗಿ ಸೇರಿಕೊಳ್ಳಬೇಕು.

(iv) ಅರ್ಜಿದಾರನು ಈ ಮುಂದಿನ ಯಾವುದೇ ಘೋಷಣೆಯನ್ನು ಕ್ಲೇಮು ಮಾಡಬಹುದು–

(ಎ) ಚುನಾಯಿತ ಅಭ್ಯರ್ಥಿಯ ಚುನಾವಣೆ ಶೂನ್ಯ;

(ಬಿ) ಚುನಾಯಿತ ಅಭ್ಯರ್ಥಿಯ ಚುನಾವಣೆ ಶೂನ್ಯ ಮತ್ತು ತಾನೇ ಅಥವಾ ಇತರ ಅಭ್ಯರ್ಥಿಯು ಯುಕ್ತವಾಗಿ ಚುನಾಯಿತರಾಗಿದ್ದಾರೆ.

(30) ಚುನಾವಣಾ ಪಿಟಿಷನನ್ನು ಅರ್ಜಿ ಸಲ್ಲಿಸುವ ವ್ಯಕ್ತಿ ತಾನೇ ಖುದ್ದಾಗಿ ಅಥವಾ ಆತನಿಂದ ಅಧಿಕೃತಗೊಂಡ ವ್ಯಕ್ತಿ ಈ ಬಗ್ಗೆ ಲಿಖಿತವಾಗಿ ಅಥವಾ ಸ್ವೀಕೃತಿ ಬಾಕಿಯಿರುವ ನೋಂದಾಯಿತ ಅಂಚೆಯ ಮೂಲಕ ಚುನಾವಣಾಧಿಕಾರಿಗೆ ಸಲ್ಲಿಸತಕ್ಕದ್ದು. ಚುನಾವಣಾಧಿಕಾರಿಯು ಖುದ್ದಾಗಿ ಸಲ್ಲಿಸಿದ ಪ್ರತಿಯೊಂದು ಪಿಟಿಷನ್‌ಗೆ ಒಂದು ಲಿಖಿತ ಸ್ವೀಕೃತಿಯನ್ನು ನೀಡತಕ್ಕದ್ದು.

(31) ಚುನಾವಣಾಧಿಕಾರಿಯು ಚುನಾವಣಾ ಪಿಟಿಷನನ್ನು ಸ್ವೀಕರಿಸಿದ ಒಂದು ವಾರದ ಒಳಗಾಗಿ ಅದರ ಮೇಲಿನ ತನ್ನ ಷರಾದೊಂದಿಗೆ ಅದನ್ನು ಸರ್ಕಾರಕ್ಕೆ ರವಾನಿಸತಕ್ಕದ್ದು.

(32) ಚುನಾವಣಾಧಿಕಾರಿಯಿಂದ ಚುನಾವಣಾ ಪಿಟಿಷನ್ ಅನ್ನು ಸ್ವೀಕರಿಸಿದ ನಂತರ, ಸರ್ಕಾರವು ತಾನು ಸರಿಯೆಂದು ಭಾವಿಸಬಹುದಾದ ಅಂತಹ ವಿಚಾರಣೆಯ ನಂತರ ಮತ್ತು ವ್ಯವಹರಣೆಗಳ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಒಂದುಅವಕಾಶವನ್ನು ನೀಡಿದ ನಂತರ, –

(ಎ) ಅರ್ಜಿಯನ್ನು (ಪಿಟಿಷನ್) ವಜಾ ಮಾಡಿ ಅಥವಾ

(ಬಿ) ಚುನಾಯಿತ ಅಭ್ಯರ್ಥಿಯ ಚುನಾವಣೆಯನ್ನು ಶೂನ್ಯಎಂದು; ಅಥವಾ

(ಸಿ) ಚುನಾಯಿತ ಅಭ್ಯರ್ಥಿಯ ಚುನಾವಣೆಯನ್ನು ಶೂನ್ಯ ಎಂದು ಮತ್ತು ಅರ್ಜಿದಾರ ಅಥವಾ ಇತರ ಯಾರೇ ಅಭ್ಯರ್ಥಿಯುಕ್ತವಾಗಿ ಚುನಾಯಿತರಾಗಿದ್ದಾರೆಂದು

– ಆದೇಶ ಹೊರಡಿಸಬಹುದು.

(33) ಉಪ–ನಿಯಮಗಳು (8) ರಿಂದ (32)ರ (ಎರಡೂ ಸೇರಿದಂತೆ) ಉಪಬಂಧಗಳು ಈ ಅಧಿನಿಯಮದಡಿ ಈ ನಿಯಮದಡಿ ಉಲ್ಲೇಖಿಸಲಾದ ಮತಕ್ಷೇತ್ರದಿಂದ ನಡೆಯುವ ಉಪ ಚುನಾವಣೆಗೂ ಅನ್ವಯಿಸತಕ್ಕದ್ದು. ಇಂತಹ ಉಪ–ಚುನಾವನೆಯಿಂದ ಸದಸ್ಯರನ್ನು ಚುನಾಯಿಸಿ ಎಂದು ಮತಕ್ಷೇತ್ರವನ್ನು ಕೋರಿರುವ ಅಧಿಸೂಚನೆಯ ದಿನಾಂಕದಂದು ಚಾಲ್ತಿಯಿರುವ ಮತದಾರರ ಪಟ್ಟಿಯನ್ನು ಮಾರ್ಪಾಡುಗಳಿಗೆ ಒಳಪಟ್ಟು ಉಪ–ಚುನಾವಣೆಯ ಉದ್ದೇಶಕ್ಕಾಗಿನ ಮತದಾರರ ಪಟ್ಟಿ ಎಂದು ಭಾವಿಸತಕ್ಕದ್ದು.

**6. ಆಕಸ್ಮಿಕ ಖಾಲಿಸ್ಥಾನಗಳು.–** ಪ್ರಕರಣ 3ರ ಉಪ–ಪ್ರಕರಣ (2)ರಖಂಡ (ಬಿ)ಯು ಉಪಖಂಡಗಳಾದ (v), (vi) ಅಥವಾ (vii) ಅಥವಾ ಖಂಡ (ಸಿ)ಯಲ್ಲಿ ಉಲ್ಲೇಖಿಸಲಾದ ಯಾವುದೇ ಮತಕ್ಷೇತ್ರದಿಂದ ಪರಿಷತ್ತಿನ ಸದಸ್ಯರ ಹುದ್ದೆಯಲ್ಲಿ ಯಾವುದೇ ಖಾಲಿಸ್ಥಾನ ಕಂಡು ಬಂದರೆ, ಅನುಕೂಲವಾಗಬಹುದಾದಷ್ಟು ಬೇಗನೇ, ಚುನಾವಣೆಯ ಮೂಲಕ ಅಥವಾ ಸಂದರ್ಭಾನುಸಾರವಾಗಿ ಸದಸ್ಯರ ನಾಮನಿರ್ದೇಶನದ ಮೂಲಕ ಅದನ್ನು ಭರ್ತಿ ಮಾಡತಕ್ಕದ್ದು.

## ಭಾಗ–III

## ನೋಂದಣಿ

**7. ರಿಜಿಸ್ಟರನ್ನು ವಿಭಾಗಗಳಾಗಿ ಮತ್ತು ಭಾಗಗಳಾಗಿ ವರ್ಗೀಕರಿಸುವುದು ಮತ್ತು ವಿಭಜಿಸುವುದು,–**

(1) ಪರಿಷತ್ತು ಈ ಮುಂದಿನ ನಾಲ್ಕು ವಿಭಾಗಗಳಾಗಿ ವಿಭಜಿಸಿರುವ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.–

ಎ. ದಾದಿಯರು

ಬಿ. ಸೂಲಗಿತ್ತಿಯರು

ಸಿ. ಸಹಾಯಕದಾದಿಯರು –ಸೂಲಗಿತ್ತಿಯರು

ಡಿ. ಆರೋಗ್ಯ ಸಂದರ್ಶಕರು.

(2) ಪಟ್ಟಿಯ ರಿಜಿಸ್ಟರಿನಲ್ಲಿ ದಾದಿಯರ ನಮೂದುಗಳನ್ನು ಅನುಸೂಚಿ I ರ ನಮೂನೆ (ಸಿ) ಯಲ್ಲಿ ಗೊತ್ತುಪಡಿಸಿದ ಅರ್ಜಿಯನ್ನು ಸಲ್ಲಿಸುವ ಮೂಲಕ ಮಾಡತಕ್ಕದ್ದು.

(3) ರಿಜಿಸ್ಟರಿನಲ್ಲಿ ನಮೂದುಗಳನ್ನು ಮಾಡಿದ ನಂತರ, ನೋಂದಣಿ ಪ್ರಮಾಣಪತ್ರಗಳನ್ನು ನಮೂನೆ ಡಿ, ಇ, ಎಫ್, ಜಿ ಮತ್ತು ಎಚ್ ನಲ್ಲಿರುವಂತೆ ನೀಡತಕ್ಕದ್ದು.

(4) ದಾದಿಯರ ರಿಜಿಸ್ಟರನ್ನು ಈ ಮುಂದಿನ ಭಾಗಗಳು ಮತ್ತು ವಿಭಾಗಗಳಾಗಿ ನಿರ್ವಹಿಸಬೇಕು.

**ವಿಭಾಗ–I–ದಾದಿಯರು**

ಭಾಗ–ಎ– ಸಾಮಾನ್ಯದಾದಿಯರು

ಭಾಗ–ಬಿ – ಸೂಲಗಿತ್ತಿಯರು

ಭಾಗ–ಸಿ – ಮನೋವೈದ್ಯಕೀಯ ದಾದಿಯರು

**ವಿಭಾಗ–II–ದಾದಿಯರು**

ಭಾರತದ ನಾಗರಿಕರಲ್ಲದ ಪರಿಷತ್ತಿನ ಅನುಮೋದನೆಯೊಂದಿಗೆ ರಾಜ್ಯದಲ್ಲಿ ಎಲ್ಲಿಯಾದರೂ ದಾದಿ, ಶಿಕ್ಷಕಿ ಅಥವಾ ಆಡಳಿತಾಧಿಕಾರಿಯಾಗಿ ಕೆಲಸ ಮಾಡುತ್ತಿರುವ ಅಥವಾ ಕೆಲಸ ಮಾಡಲು ಇಚ್ಛಿಸುವ ವ್ಯಕ್ತಿಯ ಹೆಸರನ್ನು, ಸದರಿ ಅಧ್ಯಕ್ಷರು ಈ ಬಗ್ಗೆ ಹೊರಡಿಸಿದ ಆದೇಶದಲ್ಲಿ ಗೊತ್ತುಪಡಿಸಲಾದ ಅವಧಿಯವರೆಗೆ ರಾಜ್ಯ ರಿಜಿಸ್ಟರಿನಲ್ಲಿ ತಾತ್ಕಾಲಿಕವಾಗಿ ಪಟ್ಟಿಯಲ್ಲಿ ಸೇರಿಸಬಹುದು;

ಪರಂತು, ಅಂತಹ ವ್ಯಕ್ತಿಯು ಮಾಡುವ ವೃತ್ತಿಯು ಅವನು ಇರುವ ರಾಜ್ಯಕ್ಕೆ ಮಾತ್ರ ಸೀಮಿತವಾಗಿರತಕ್ಕದ್ದು.

**ವಿಭಾಗ–III–ದಾದಿಯರು**

ಕರ್ನಾಟಕ ದಾದಿಯರ ಪರಿಷತ್ತು ಗೊತ್ತುಪಡಿಸಿದ ಕೋರ್ಸುಗಳಿಗೆ ಅನುಗುಣವಾಗಿಲ್ಲದ ವಿದ್ಯಾರ್ಹತೆಯನ್ನು ಹೊಂದಿರುವ ದಾದಿಯರು.

ಭಾಗ–ಎ– ಸಾಮಾನ್ಯ ಶುಶ್ರೂಷೆಯಲ್ಲಿ ತರಬೇತಿ ಹೊಂದಿರುವ ದಾದಿಯರು ಮತ್ತು ಮಹಿಳೆ ಮತ್ತು ಮಕ್ಕಳ ವಿಭಾಗದಲ್ಲಿ ತರಬೇತಿ ಪಡೆದವರು (ಉನ್ನತ ಶ್ರೇಣಿ)

ಭಾಗ–ಬಿ – ಸಾಮಾನ್ಯ ಶುಶ್ರೂಷೆಯಲ್ಲಿ ಕೆಳ ಶ್ರೇಣಿಯಲ್ಲಿ ತರಬೇತಿ ಹೊಂದಿದ ದಾದಿಯರು.

ಭಾಗ–ಸಿ – ಪ್ರಾದೇಶಿಕ ಭಾಷೆಯಲ್ಲಿ (ಕೆಳ ಶ್ರೇಣಿ) ಮಹಿಳೆ ಮತ್ತು ಮಕ್ಕಳ ಬಗ್ಗೆ ಆಸ್ಪತ್ರೆಗಳಲ್ಲಿ ತರಬೇತಿ ಹೊಂದಿದ ದಾದಿಯರು.

**ಆರೋಗ್ಯ ಸಂದರ್ಶಕರು,–** ಪರಿಷತ್ತು ಅನುಮೋದಿಸಿದಂತಹ ತರಬೇತಿ ಹೊಂದಿದ ಮತ್ತು ಅಂತಹ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮತ್ತು ಮಾನ್ಯತೆ ಹೊಂದಿದ ಪ್ರಮಾಣಪತ್ರವನ್ನು ಹೊಂದಿರುವ ಅಭ್ಯರ್ಥಿಗಳು.

**ವಿಭಾಗ–I**

**ಸೂಲಗಿತ್ತಿಯರು.–** ಪರಿಷತ್ತು ಅನುಮೋದಿಸಿದಂತಹ ಅಂತಹ ತರಬೇತಿ ಹೊಂದಿದ ಮತ್ತು ಅಂತಹ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮತ್ತು ಸೂಲಗಿತ್ತಿಯರೆಂದು ಮಾನ್ಯತೆ ಹೊಂದಿದ ಪ್ರಮಾಣಪತ್ರವನ್ನು ಹೊಂದಿರುವ ಅಭ್ಯರ್ಥಿಗಳು.

**ವಿಭಾಗ–II**

ತರಬೇತಿ ಹೊಂದಿದ ಮತ್ತು ಕರ್ನಾಟಕ ದಾದಿಯರ ಪರಿಷತ್ತು ಗೊತ್ತುಪಡಿಸಿದ ಕೋರ್ಸುಗಳಿಗೆ ಅನುಗುಣವಾಗಿಲ್ಲದ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು.

**ಸಹಾಯಕ–ದಾದಿ–ಸೂಲಗಿತ್ತಿಯರು.–**

**ವಿಭಾಗ I:** ಪರಿಷತ್ತು ಅನುಮೋದಿಸಿದಂತಹ ಅಂತಹ ತರಬೇತಿ ಹೊಂದಿದ ಮತ್ತು ಅಂತಹ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮತ್ತು ಸಹಾಯಕ–ದಾದಿ–ಸೂಲಗಿತ್ತಿಯರೆಂದು ಮಾನ್ಯತೆ ಹೊಂದಿದ ಪ್ರಮಾಣಪತ್ರವನ್ನು ಹೊಂದಿರುವ ಅಭ್ಯರ್ಥಿಗಳು.

**ವಿಭಾಗ–II:** ಮೈಸೂರು ದಾದಿಯರ ಪರಿಷತ್ತು ಅನುಮೋದಿಸಿದ ಕೋರ್ಸುಗಳಿಗೆ ಅನುಗುಣವಾಗಿಲ್ಲದ ಅಂತಹ ತರಬೇತಿ ಹೊಂದಿದ ಮತ್ತು ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು.

**ಅಧಿನಿಯಮದ ಪ್ರಕರಣ 17–ಭಾಗ III ರಲ್ಲಿ ಉಲ್ಲೇಖಿಸಲಾದ ದಾದಿಯರು, ಸೂಲಗಿತ್ತಿಯರು, ಆರೋಗ್ಯ ಸಂದರ್ಶಕರು ಮತ್ತು ಸಹಾಯಕ ದಾದಿಯರಾಗಿ ವೃತ್ತಿ ಮಾಡುತ್ತಿರುವ ವ್ಯಕ್ತಿಗಳ ಪಟ್ಟಿಯ ನಿರ್ವಹಣೆ.–** (i) ಪರಿಷತ್ತು ಅಧಿನಿಯಮದ ಪ್ರಕರಣ 12ರ ಭಾಗ IIIರಡಿ ನಿರ್ವಹಿಸಲಾದ ರಿಜಿಸ್ಟರಿನಲ್ಲಿ ಯಾರ

ಹೆಸರುಗಳು ನಮೂದಾಗಿಲ್ಲವೋ ಮತ್ತು ದಾದಿಯರು, ಸೂಲಗಿತ್ತಿಯರು, ಆರೋಗ್ಯ ಸಂದರ್ಶಕರು ಮತ್ತು ಸಹಾಯಕ–ದಾದಿ–ಸೂಲಗಿತ್ತಿಯರಾಗಿ ವೃತ್ತಿ ಮಾಡುತ್ತಿರುವರೋ ಅಂತಹ ವ್ಯಕ್ತಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(ii) ಈ ಪಟ್ಟಿಯನ್ನು 4 ಭಾಗಗಳಾಗಿ ವಿಭಜಿಸತಕ್ಕದ್ದು.

ಭಾಗ 'ಎ' – ಪಟ್ಟಿ ಮಾಡಿದ ದಾದಿಯರಿಗಾಗಿ

ಭಾಗ 'ಬಿ' – ಪಟ್ಟಿ ಮಾಡಿದ ಸೂಲಗಿತ್ತಿಯರಿಗಾಗಿ

ಭಾಗ 'ಸಿ' – ಪಟ್ಟಿ ಮಾಡಿದಆರೋಗ್ಯ ಸಂದರ್ಶಕರಿಗಾಗಿ

ಭಾಗ 'ಡಿ' – ಪಟ್ಟಿ ಮಾಡಿದ ಸಹಾಯಕ ದಾದಿಯರಿಗಾಗಿ

**ರಿಜಿಸ್ಟರಿನ ಕಾಲಂಗಳು**

1. ಕ್ರಮ ಸಂಖ್ಯೆ
2. ಹೆಸರು (ಕುಲನಾಮ ಕೊನೆಯಲ್ಲಿರಬೇಕು) ವಿವಾಹಿತ ದಾದಿಯರಾದ ಸಂದರ್ಭದಲ್ಲಿ ಹೆಣ್ಣಿನ ತವರಿನಲ್ಲಿಟ್ಟ ಹೆಸರನ್ನು ಮೊದಲಿಗೆ ಬರೆಯಬೇಕು.
3. ತಂದೆಯ ಹೆಸರು
4. ಕ್ರಿಶ್ಚಿಯನ್ ಯುಗ ಪ್ರಕಾರ ಹುಟ್ಟಿದ ದಿನಾಂಕ
5. ಖಾಯಂ ವಿಳಾಸ
6. ದಿನಾಂಕದೊಂದಿಗೆ ತರಬೇತಿ ಸಂಸ್ಥೆಯ ಹೆಸರು.
7. ದಿನಾಂಕದೊಂದಿಗೆ ನೋಂದಣಿಯ ಸಂಖ್ಯೆ
8. ಮತ್ತೊಂದು ಪರಿಷತ್ತಿನಲ್ಲಿ ಈಗಾಗಲೇ ನೋಂದಣಿಯಾಗಿದ್ದರೆ ದಿನಾಂಕದೊಂದಿಗೆ ನೋಂದಣಿ ಹೊಂದಿದ ಪರಿಷತ್ತಿನ ಹೆಸರು ಮತ್ತು ಸಂಖ್ಯೆ.
9. ಪ್ರಮಾಣಪತ್ರದ ವಿದ್ಯಾರ್ಹತೆಯ ನಂತರ ಯಾವುದಾದರೂ ವಿದ್ಯಾರ್ಹತೆ ಇದ್ದರೆ, ದಿನಾಂಕಗಳೊಂದಿಗೆ ಹಾಜರಾದ ಸಂಸ್ಥೆಗಳು.
10. ನೋಂದಣಿ ನವೀಕರಣದ ದಿನಾಂಕ

**8. ರಿಜಿಸ್ಟರಿನಲ್ಲಿ ಹೆಸರು ಸೇರಿಸುವುದು.–** (1) ರಿಜಿಸ್ಟರಿನ ಒಂದು ಭಾಗದಲ್ಲಿ ಹೆಸರು ಸೇರಿಸಲು ಕೋರಿ ಅನುಸೂಚಿ Iರ ನಮೂನೆ 'ಸಿ' ಯಲ್ಲಿ ರಿಜಿಸ್ಟ್ರಾರರಿಗೆ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ವ್ಯಕ್ತಿ ಮತ್ತು ಈ ಬಗ್ಗೆ ರಚಿಸಲಾದ ತರಬೇತಿ ನಿಯಮಗಳನ್ನು ಮತ್ತು ಪ್ರಕ್ರಿಯೆಗಳನ್ನು ಪಾಲಿಸುವ ವ್ಯಕ್ತಿ

ಮತ್ತು ಅನುಮೋದಿತ ತರಬೇತಿ ಸಂಸ್ಥೆಯ ನರ್ಸಿಂಗ್ ಅಧೀಕ್ಷಕರು/ ಪ್ರಾಂಶುಪಾಲರು ಅಥವಾ ಇತರೆ ಯಾರೇ ಜವಾಬ್ದಾರಿಯುತ ಅಧಿಕಾರಿಗಳು ಅಂತಹ ವ್ಯಕ್ತಿಯು ನಿಗದಿಪಡಿಸಿದ ತರಬೇತಿ ಕೋರ್ಸನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದಾನೆ ಮತ್ತು ತೇರ್ಗಡೆ ಹೊಂದಿದ್ದಾನೆ ಎಂದು ಸಹಿ ಹಾಕಿರುವ ಪ್ರಮಾಣಪತ್ರವನ್ನು ಉಪ–ವಿಧಿಗಳಲ್ಲಿ ತಿಳಿಸಿರುವ ನಮೂನೆಯಲ್ಲಿ ಸಲ್ಲಿಸುವ ವ್ಯಕ್ತಿಯ ಹೆಸರನ್ನು ರಿಜಿಸ್ಟರಿನ ಅಂತಹ ಭಾಗದಲ್ಲಿ ಸೇರಿಸಬಹುದು. ಅರ್ಜಿಯೊಂದಿಗೆ ಈ ಮುಂದಿನಂತೆ ಶುಲ್ಕವನ್ನು ಪಾವತಿಸತಕ್ಕದ್ದು.

(ಎ)ದಾದಿ ಅಥವಾ ಆರೋಗ್ಯ ಸಂದರ್ಶಕರಾಗಿ ನೋಂದಣಿ ಹೊಂದಲು–ರೂ. 10

(ಬಿ)ಸೂಲಗಿತ್ತಿ ಅಥವಾ ಮನೋವೈದ್ಯಕೀಯ ದಾದಿಯಾಗಿ ನೋಂದಣಿ ಹೊಂದಲು–ರೂ. 5

(ಸಿ)ಉನ್ನತ ಅಥವಾ ಹೆಚ್ಚಿನ ವಿದ್ಯಾಭ್ಯಾಸವನ್ನು ನಮೂದಿಸಲು – ರೂ.5

(ಡಿ)ಪಟ್ಟಿ ಮಾಡಿದ ದಾದಿಯರು ಅಥವಾ ಆರೋಗ್ಯ ಸಂದರ್ಶಕರಿಗಾಗಿ– ರೂ.10

(ಇ)ಪಟ್ಟಿ ಮಾಡಿದ ಸೂಲಗಿತ್ತಿಯರು ಅಥವಾ ಸಹಾಯಕ ದಾದಿ ಸೂಲಗಿತ್ತಿಯರಿಗಾಗಿ–ರೂ.5

(2) ದಾದಿಯರ 'ಎ' ವಿಭಾಗದಲ್ಲಿ ಹೆಸರು ನಮೂದಾಗಿರುವ ಮತ್ತು ವಯಸ್ಕ ಪುರುಷ ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸಾ ವಾರ್ಡುಗಳಲ್ಲಿ 6 ತಿಂಗಳ ತರಬೇತಿ ಹೊಂದುವ ಮೂಲಕ ಪರಿಷತ್ತಿನ ಸಾಮಾನ್ಯ ಶುಶ್ರೂಷೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ದಾದಿಯರನ್ನು ದಾದಿಯರ ರಿಜಿಸ್ಟರಿನ ವಿಭಾಗ Iರ ಭಾಗ "ಎ" ರಡಿ ನೋಂದಣಿ ಮಾಡಬಹುದು.

(3) ಭಾರತದ ಯಾವುದೇ ರಾಜ್ಯದಲ್ಲಿ ಅಥವಾ ಪಾರಸ್ಪರಿಕ ನೋಂದಣಿಗಾಗಿ ಪರಿಷತ್ತು ಒಪ್ಪಂದ ಮಾಡಿಕೊಂಡಿರುವ ಯಾವುದೇ ದೇಶದಲ್ಲಿ ತರಬೇತಿ ಹೊಂದಿದ ಮತ್ತು ನೋಂದಾಯಿತರಾದ ವ್ಯಕ್ತಿಗಳ ಹೆಸರನ್ನು ಉಪ–ವಿಧಿಗಳಲ್ಲಿ ತಿಳಿಸಲಾದ ಅಂತಹ ಷರತ್ತುಗಳ ಪೂರೈಕೆಯ ನಂತರ ಮತ್ತು ನಿಯಮ 8ರ ಉಪ–ನಿಯಮ (1)ರಡಿ ಪಾವತಿಸಬೇಕಾದ ಶುಲ್ಕಗಳ ಪಾವತಿಯ ನಂತರ ರಿಜಿಸ್ಟರಿನ ಸಮರ್ಪಕ ಭಾಗದಲ್ಲಿ ಸೇರಿಸತಕ್ಕದ್ದು.

(4) ಈ ನಿಯಮದಲ್ಲಿ ಇರುವುದು ಏನೇ ಆದರೂ, ಶಾಸನಬದ್ಧ ಪರಿಷತ್ತಿನ ಸ್ಥಾಪನೆಗಿಂತಲೂ ಮುಂಚಿತವಾಗಿ ಭಾರತದ ಯಾವುದೇ ರಾಜ್ಯದಲ್ಲಿ ಅಥವಾ ಪರಿಷತ್ತು ಪಾರಸ್ಪರಿಕ ನೋಂದಣಿಗಾಗಿ ಒಪ್ಪಂದ ಮಾಡಿಕೊಂಡಿರುವ ಯಾವುದೇ ದೇಶದಲ್ಲಿ ತರಬೇತಿ ಹೊಂದಿದ ವ್ಯಕ್ತಿಯ ಹೆಸರನ್ನು ಪರಿಷತ್ತು

ಸಮರ್ಪಕವಾಗಿ ಪರಿಗಣಿಸಬಹುದಾದ ಅಂತಹ ಷರತ್ತುಗಳನ್ನು ಪೂರೈಸಿದ ನಂತರ ಮತ್ತು ಪ್ರತೀ ವೈಯಕ್ತಿಕ ಪ್ರಕರಣದ ಗುಣಾವಗುಣಗಳ ಆಧಾರದ ಮೇಲೆ ರಿಜಿಸ್ಟರಿನ ಯಾವುದೇ ಭಾಗದಲ್ಲಿ ಪರಿಷತ್ತು ಸೇರಿಸತಕ್ಕದ್ದು.

(5) ಯಾವುದೇ ತರಬೇತಿ ಸಂಸ್ಥೆಯಲ್ಲಿ ದಾದಿ ಅಥವಾ ಆರೋಗ್ಯ ಸಂದರ್ಶಕರಾಗಿ ತರಬೇತಿ ಹೊಂದುತ್ತಿರುವುದಕ್ಕೆ ವಿದ್ಯಾರ್ಥಿಯೆಂದು ಹೆಸರು ಸೇರಿಸಲು ಇಚ್ಛಿಸುವ ಯಾರೇ ವ್ಯಕ್ತಿಯು–

(ಎ) ಈ ಮುಂದಿನ ದಾಖಲಾತಿ ಸಾಕ್ಷ್ಯವನ್ನು ಹಾಜರುಪಡಿಸತಕ್ಕದ್ದು

(i) ಆತ/ಆಕೆ ಎಸ್.ಎಸ್.ಎಲ್.ಸಿ ಅಥವಾ ಸಮಾನಾಂತರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಬಗ್ಗೆ.

ಎಸ್.ಎಸ್.ಎಲ್.ಸಿ. ಕೋರ್ಸನ್ನು ಪೂರ್ಣಗೊಳಿಸಿರುವ, ಪರೀಕ್ಷೆಗೆ ಹಾಜರಾದ ಆದರೆ ಉತ್ತೀರ್ಣರಾಗದ ಅಭ್ಯರ್ಥಿಗಳು, ತಾವು ಆಯ್ಕೆಗೆ ಪರಿಗಣಿಸಲ್ಪಡುವ ಮೊದಲು ದಾದಿಯರ ಪರೀಕ್ಷಾ ಮಂಡಳಿ ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಷರತ್ತಿಗೆ ಒಳಪಟ್ಟು ಪರಿಗಣಿಸಲ್ಪಡತಕ್ಕದ್ದು. ಈ ವಿನಾಯ್ತಿಯು ಪ್ರೌಢಶಾಲೆಯ ಮೂರು ತರಗತಿಗಳಲ್ಲಿ ನಿಯಮಿತ ಹಾಜರಾತಿ ಹೊಂದಿರುವ ಮತ್ತು ಪ್ರೌಢಶಾಲೆಯ ಮುಖಾಂತರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗಿರುವ ವಿದ್ಯಾರ್ಥಿಗಳಿಗೆ ಅನ್ವಯಿಸುವುದು.

(ii) ಪುರುಷ ಅಭ್ಯರ್ಥಿಯಾದ ಪಕ್ಷದಲ್ಲಿ ಆತನ ವಯಸ್ಸು 17ಕ್ಕಿಂತ ಕಡಿಮೆಯಿರಬಾರದು ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಸಂಬಂಧಿಸಿಂತೆ, 17–35 ವರ್ಷಗಳಾಗಿರಬೇಕು.

(iii) ಕನಿಷ್ಠ ಎಂ.ಬಿ.ಬಿ.ಎಸ್. ವಿದ್ಯಾರ್ಹತೆ ಹೊಂದಿರುವ ವೈದ್ಯರಿಂದ ಆತ/ಆಕೆ ದೈಹಿಕವಾಗಿ ಆರೋಗ್ಯವಾಗಿದ್ದಾರೆಂದು ಪ್ರಮಾಣಪತ್ರ ತರಬೇಕು.

(iv) ಆತ/ಆಕೆ ಕಳೆದ ಮೂರು ವರ್ಷಗಳೊಳಗಾಗಿ ಲಸಿಕೆ ಪಡೆದಿದ್ದಾನೆ/ಳೆ ಅಥವಾ ಮರು ಲಸಿಕೆ ಪಡೆದಿದ್ದಾನೆ/ಳೆ.

(v) ಆತ/ಆಕೆ ಟೈಫಾಯ್ಡ್ ವಿರುದ್ಧಚುಚ್ಚುಮದ್ದು ಹಾಕಿಸಿಕೊಂಡಿದ್ದಾನೆ/ಳೆ.

(ಬಿ) (i) ಆತ/ಆಕೆ ತಾನು ಹಾಜರಾದ ಸಂಬಂಧಪಟ್ಟ ಕೊನೆಯ ಸಂಸ್ಥೆಯ ಮುಖ್ಯೋಪಾಧ್ಯಾಯ ಅಥವಾ ಪ್ರಾಂಶುಪಾಲರಿಂದ ವರ್ತನೆ ಮತ್ತು ನಡತೆ ಪ್ರಮಾಣಪತ್ರವನ್ನು ಕೂಡ ತಂದು ಹಾಜರುಪಡಿಸಬೇಕು.

(ii) ಆತ/ಆಕೆಗೆ ಸಂಬಂಧಪಡದಗಣ್ಯ ವ್ಯಕ್ತಿಯಿಂದ ಮತ್ತೊಂದು ಪ್ರಮಾಣಪತ್ರ ಪಡೆದು ಹಾಜರುಪಡಿಸಬೇಕು.

(iii) ಆತ/ಆಕೆ ಸಾಮಾನ್ಯ ಶೈಕ್ಷಣಿಕ ವಿದ್ಯಾರ್ಹತೆಯನ್ನು ಮತ್ತುಜನನ ದಿನಾಂಕವನ್ನುತೋರಿಸುವ ಶಾಲೆ ಬಿಡುವ ಪ್ರಮಾಣಪತ್ರವನ್ನು ಸಹ ಹಾಜರುಪಡಿಸಬೇಕು.

(iv) ಆತ/ಆಕೆ ಭಾರತೀಯ ರಾಷ್ಟ್ರೀಯತೆಯ ಪ್ರಮಾಣಪತ್ರವನ್ನು ಹಾಜರುಪಡಿಸತಕ್ಕದ್ದು.

(v) ಆತ/ಆಕೆ ಕಂದಾಯಇಲಾಖೆಯ ಪತ್ರಾಂಕಿತ ಅಧಿಕಾರಿಯಿಂದ ಆತ/ಆಕೆ ತಾನು ಹುಟ್ಟಿನಿಂದಲೇ ಅಥವಾ ವಾಸಮಾಡುವ ಕಾರಣದಿಂದ ಮೈಸೂರಿಗರೆಂದು ಪ್ರಮಾಣಪತ್ರವನ್ನು ಹಾಜರುಪಡಿಸತಕ್ಕದ್ದು.

(ಸಿ)ಸಹಾಯಕ –ದಾದಿ– ಸೂಲಗಿತ್ತಿಯರಾಗಿ ತರಬೇತಿ ಪಡೆಯುವುದಕ್ಕೆ ವಿದ್ಯಾರ್ಥಿಯಾಗಿ ಹೆಸರು ಸೇರಿಸುವ ಇಚ್ಛೆಯುಳ್ಳ ವ್ಯಕ್ತಿಯು ಈ ಮುಂದಿನದನ್ನು ರುಜುವಾತುಪಡಿಸಲು ದಾಖಲಾತಿ ಸಾಕ್ಷ್ಯಗಳನ್ನು ಹಾಜರುಪಡಿಸತಕ್ಕದ್ದು:–

(i). ಆಕೆ 17ಕ್ಕಿಂತ ಕಡಿಮೆಯಿಲ್ಲದ ವಯಸ್ಸಿನವಳು.

(ii). ಆಕೆ ಶಾಲೆಯ ಮೊದಲ ಏಳು ತರಗತಿಗಳನ್ನು ತೇರ್ಗಡೆಯಾಗಿದ್ದಾಳೆ.

(iii). ಆಕೆ ದೈಹಿಕವಾಗಿ ಆರೋಗ್ಯವಂತಳು.

(iv). ಆಕೆ ತಾನು ಹೋದ ಕೊನೆಯ ಶಾಲೆಯ ಮುಖ್ಯಸ್ಥರಿಂದ ಮತ್ತು ಗಣ್ಯವ್ಯಕ್ತಿಯೊಬ್ಬರಿಂದ ವರ್ತನೆ ಮತ್ತು ನಡತೆ ಪ್ರಮಾಣಪತ್ರವನ್ನು ಪಡೆದು ಸಲ್ಲಿಸತಕ್ಕದ್ದು ಮತ್ತು

(v). ಲಸಿಕೆ ಮತ್ತು ಮರು ಲಸಿಕೆಯ ಪ್ರಮಾಣಪತ್ರ.

(ಡಿ) ಸೂಲಗಿತ್ತಿತನಅಥವಾ ಶಿಶು (ಮಕ್ಕಳ) ದಾದಿ ತರಬೇತಿ ಹೊಂದಲು ವಿದ್ಯಾರ್ಥಿಯಾಗುವ ಪಕ್ಷದಲ್ಲಿ, ಆತ/ಆಕೆ ಮೂರು ವರ್ಷಗಳ ಸಾಮಾನ್ಯ ಶುಶ್ರೂಷೆ ಕೋರ್ಸಿನಲ್ಲಿ ತೇರ್ಗಡೆ ಹೊಂದಿರಬೇಕು.

(6) ಪಠ್ಯಕ್ರಮ (ದಾದಿಯರು).– (1)ವಿದ್ಯಾರ್ಥಿ ದಾದಿಯರಿಗಾಗಿನ ಪಠ್ಯಕ್ರಮವು ಮೂರು ವರ್ಷಗಳ ಅವಧಿಯನ್ನು ಹೊಂದಿರತಕ್ಕದ್ದು. ಈ ಅವಧಿಯಲ್ಲಿ ವಿದ್ಯಾರ್ಥಿಯು ಒಂದು ವರ್ಷದಲ್ಲಿ ಸಂಗ್ರಹ ಮಾಡಲಾಗದ ಒಂದು ತಿಂಗಳ ಸಾಮಾನ್ಯ ರಜೆಯನ್ನು ಮತ್ತು 15 ದಿನಗಳ ಅನಾರೋಗ್ಯರಜೆಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು. ಒಂದು ವೇಳೆ ವಿದ್ಯಾರ್ಥಿಯು ಮೇಲೆ

ತಿಳಿಸಲಾದ ರಜೆಯ ಅವಧಿಯನ್ನು ಮೀರಿ ಗೈರುಹಾಜರಾದರೆ, ಹಾಜರಾತಿ ಕೊರತೆಯನ್ನುಆತ/ಆಕೆ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡುವ ಮೊದಲು ಸರಿಪಡಿಸತಕ್ಕದ್ದು.

ಪರಂತು, ಮೂಲಭೂತ ಸಾರ್ವಜನಿಕ ಆರೋಗ್ಯ ತರಬೇತಿಯೊಂದಿಗೆ ದಾದಿಯಾಗಿ ಅರ್ಹತೆ ಹೊಂದಲು ಬಯಸುವ ಆರೋಗ್ಯ ಸಂದರ್ಶಕರು ನರ್ಸಿಂಗ್ ಶಾಲೆಯಲ್ಲಿ ಎರಡು ವರ್ಷಗಳ ಅವಧಿಯ ಸಾಮಾನ್ಯ ಶುಶ್ರೂಷೆಯಲ್ಲಿ ತರಬೇತಿ ಹೊಂದುವುದು ಅವಶ್ಯಕ.

ಪರಂತು, ಸಾಮಾನ್ಯ ನರ್ಸಿಂಗ್‌ನಲ್ಲಿ ಕೋರ್ಸನ್ನು ಮಾಡಲಿಚ್ಛಿಸುವ ನೋಂದಾಯಿತ ಸಹಾಯಕದಾದಿ – ಸೂಲಗಿತ್ತಿ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿದರೆ, ಆಕೆಗೆ ಆರು ತಿಂಗಳುಗಳ ವಿನಾಯಿತಿಯನ್ನು ನೀಡಬಹುದು.

(2) (ಎ) ತರಬೇತಿಯ ಅವಧಿಯಲ್ಲಿ ನಾಲ್ಕು ಪ್ರಮುಖ ಸೇವೆಗಳಾದ –ವೈದ್ಯಕೀಯ– ಶಸ್ತ್ರಚಿಕಿತ್ಸೆಯ, ಸ್ತ್ರೀರೋಗಶಾಸ್ತ್ರ ಮತ್ತು ಮತ್ಯ ಮಕ್ಕಳ ರೋಗಗಳು ಮತ್ತು ಹೊರ–ರೋಗಿ ಆಪರೇಷನ್ ಥಿಯೇಟರ್ ಕಾರ್ಯ, ಪುರುಷರ ನರ್ಸಿಂಗ್‌ನಲ್ಲಿ ಕನಿಷ್ಠ ಆರು ತಿಂಗಳುಗಳ ಅನುಭವದೊಂದಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸೂಚನೆಗಳು ಮತ್ತು ಪ್ರಾಯೋಗಿಕ ಕೆಲಸವನ್ನು ನೀಡತಕ್ಕದ್ದು. ಪರಂತು, ಪುರುಷ ವಿದ್ಯಾರ್ಥಿಗಳಿಗೆ ಪುರುಷರ ಮತ್ತು 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ನರ್ಸಿಂಗ್ ಮತ್ತು ಉಪ–ವಿಧಿಗಳಲ್ಲಿ ತಿಳಿಸಿರಬಹುದಾದಂತೆ ಎರಡು ವಿಶೇಷ ಕ್ಷೇತ್ರಗಳಲ್ಲಿ ಪ್ರತೀ ಮೂರು ತಿಂಗಳ ತರಬೇತಿಯನ್ನು ನೀಡುವುದು ಒಳಗೊಂಡಿರತಕ್ಕದ್ದು.

(ಬಿ) ಪರೀಕ್ಷೆಯ ಸಮಯದಲ್ಲಿ ವಿದ್ಯಾರ್ಥಿಯ ನರ್ಸಿಂಗ್ ಟ್ಯೂಟರ್‌ರವರು ಮತ್ತು ನರ್ಸಿಂಗ್ ಅಧೀಕ್ಷಕರು ದೃಢೀಕರಿಸಿದ ವಿದ್ಯಾರ್ಥಿಯ ಪ್ರಾಯೋಗಿಕ ಕಾರ್ಯದ ವರದಿಯನ್ನು ಪರೀಕ್ಷಕರ ಮುಂದೆ ಹಾಜರುಪಡಿಸತಕ್ಕದ್ದು.

3. ಯಾರೇ ವಿದ್ಯಾರ್ಥಿಗೆ ತರಬೇತಿ ಕೋರ್ಸಿನ ಅವಧಿಯಲ್ಲಿ ವೃತ್ತಿ ಮಾಡಲು ಅನುಮತಿ ನೀಡತಕ್ಕದ್ದಲ್ಲ.

4. ತರಬೇತಿಯ ಕೋರ್ಸು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಅನುಮೋದಿಸಲಾದ ಭಾ.ನ.ಪ.ನ ಪಠ್ಯಕ್ರಮಕ್ಕೆ ಅನುಗುಣವಾಗಿರತಕ್ಕದ್ದು.

(7) ಪಠ್ಯಕ್ರಮ (ಸಹಾಯಕದಾದಿ–ಸೂಲಗಿತ್ತಿ) – ಸಹಾಯಕದಾದಿ – ಸೂಲಗಿತ್ತಿ ವಿದ್ಯಾರ್ಥಿಯ ಪಠ್ಯಕ್ರಮವು ಈ ಮುಂದಿನಂತಿರತಕ್ಕದ್ದು.

(1) ನರ್ಸಿಂಗ್‌ನಲ್ಲಿ 9 ತಿಂಗಳುಗಳ ತರಬೇತಿ ಮತ್ತು ಸೂಲಗಿತ್ತಿತನದಲ್ಲಿ 12 ತಿಂಗಳುಗಳ ತರಬೇತಿ, ಉಳಿದ 3 ತಿಂಗಳುಗಳ ಗೃಹ ಸೂಲಗಿತ್ತಿತನಕ್ಕೆ ಉಪಯೋಗಿಸಿಕೊಳ್ಳತಕ್ಕದ್ದು. ಪರಿಶಿಷ್ಟ II –ರಲ್ಲಿ ರೂಪಿಸಿರುವ ವ್ಯಾಸಂಗಕ್ರಮವನ್ನುಅನುಸರಿಸತಕ್ಕದ್ದು.

9 ತಿಂಗಳುಗಳ ತರಬೇತಿಯ ಅವಧಿಯಲ್ಲಿ ವಿದ್ಯಾರ್ಥಿಯು ಎರಡು ವಾರಗಳ ಸಾಮಾನ್ಯರಜೆ ಮತ್ತು 7 ದಿನಗಳ ಅನಾರೋಗ್ಯ ರಜೆಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು. ನಂತರದ 15 ತಿಂಗಳುಗಳ ತರಬೇತಿ ಅವಧಿಯಲ್ಲಿ, ವಿದ್ಯಾರ್ಥಿಯು 5 ವಾರಗಳ ಸಾಮಾನ್ಯ ರಜೆಯನ್ನು ಮತ್ತು ಏಳು ದಿನಗಳ ಅನಾರೋಗ್ಯ ರಜೆಯನ್ನು ಪಡೆಯಲು ಹಕ್ಕುಳ್ಳವನಾಗತಕ್ಕದ್ದು.

(8) ಸೂಲಗಿತ್ತಿಯರ ವ್ಯಾಸಂಗಕ್ರಮ.– ನರ್ಸಿಂಗ್ ನರ್ಸಿಂಗ್‌ನಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗೆ ವ್ಯಾಸಂಗಕ್ರಮ ಈ ಮುಂದಿನಂತಿರತಕ್ಕದ್ದು:–

(1) ತರಬೇತಿಯ ಕನಿಷ್ಠ ಅವಧಿ 9 ತಿಂಗಳು ಆಗಿರತಕ್ಕದ್ದು. ಈ ತರಬೇತಿಯ ಅವಧಿಯಲ್ಲಿ ವಿದ್ಯಾರ್ಥಿಗೆ 15 ದಿನಗಳ ಸಾಮಾನ್ಯರಜೆ ಮತ್ತು 7 ದಿನಗಳ ಅನಾರೋಗ್ಯರಜೆಯನ್ನು ಮಂಜೂರು ಮಾಡಬಹುದು. ಪರಿಶಿಷ್ಟ II–2ರಲ್ಲಿ ರೂಪಿಸಿರುವ ಪಠ್ಯಕ್ರಮವನ್ನು ಅನುಸರಿಸತಕ್ಕದ್ದು.

(9) ಮನೋವೈದ್ಯಶಾಸ್ತ್ರ ಶುಶ್ರೂಷೆಯ ವ್ಯಾಸಂಗಕ್ರಮ.–

ಕೋರ್ಸಿನ ಅವಧಿ 2 ವರ್ಷಗಳಾಗಿರತಕ್ಕದ್ದು ಮೊದಲ 9 ತಿಂಗಳುಗಳಲ್ಲಿ ಸಾಮಾನ್ಯ ನರ್ಸಿಂಗ್ ತರಬೇತಿಗೆ ಪಡೆಯತಕ್ಕದ್ದು ಮತ್ತು ಎರಡನೆಯ 9 ತಿಂಗಳುಗಳಲ್ಲಿ ಸೂಲಗಿತ್ತಿತನದ ಕೋರ್ಸನ್ನು ಪಡೆಯತಕ್ಕದ್ದು ಮತ್ತು ಕೊನೆಯ ಒಂದು ವರ್ಷದಲ್ಲಿ ಗೃಹ ಸಂದರ್ಶನ ಮತ್ತು ಆರೋಗ್ಯಕಾರ್ಯದಲ್ಲಿ ಪ್ರಾಯೋಗಿಕ ನಿರ್ದೇಶನಗಳನ್ನು ನೀಡಲು ಸುಸಜ್ಜಿತ ಕ್ಷೇತ್ರೀಯ ಕೇಂದ್ರದಲ್ಲಿ ಕಳೆಯತಕ್ಕದ್ದು. ಈ ಕೇಂದ್ರವು ಶಾಲೆಯ ಆಡಳಿತದ ಅಡಿಯಲ್ಲಿರಬಹುದು ಅಥವಾ ಶಿಕ್ಷಣ ನೀಡುವುದಕ್ಕಾಗಿ ಪೂರಕ ಸಿಬ್ಬಂದಿ ಅವಶ್ಯವಿದ್ದರೆ ಉಪಯೋಗಿಸಿಕೊಳ್ಳುವ ಕೇಂದ್ರವಾಗಿರಬಹುದು. ಮೊದಲ 9 ತಿಂಗಳ ಅವಧಿಯಲ್ಲಿ ವಿದ್ಯಾರ್ಥಿಗೆ 05 ದಿನಗಳ ಸಾಧಾರಣರಜೆ ಮತ್ತು 7 ದಿನಗಳ ಅನಾರೋಗ್ಯರಜೆಯ ಅವಕಾಶವಿರತಕ್ಕದ್ದು ನಂತರದ ತಿಂಗಳುಗಳಲ್ಲಿ ವಿದ್ಯಾರ್ಥಿಗಳಿಗೆ 15 ದಿನಗಳ ಸಾಮಾನ್ಯರಜೆ ಮತ್ತು 7 ದಿನಗಳ ಅನಾರೋಗ್ಯ

ರಜೆಯ ಅವಕಾಶವಿರಬಹುದು ಮತ್ತು ಕಡೆಯ ಒಂದು ವರ್ಷದಲ್ಲಿ, ಒಂದು ತಿಂಗಳ ಸಾಧಾರಣರಜೆ ಮತ್ತು 7 ದಿನಗಳ ಅನಾರೋಗ್ಯ ರಜೆಯ ಅವಕಾಶವಿರಬೇಕು. ಪರಿಶಿಷ್ಟ II–4ರಲ್ಲಿ ರೂಪಿಸಿರುವ ಪಠ್ಯಕ್ರಮವನ್ನು ಅನುಸರಿಸತಕ್ಕದ್ದು.

9. **ವಿಳಾಸ ಬದಲಾವಣೆ.–** ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯ ಹೆಸರಿನ ಯಾವುದೇ ಬದಲಾವಣೆ ಅಥವಾ ಶಾಶ್ವತ ವಿಳಾಸದ ಬದಲಾವಣೆಯಾದ ಬಗ್ಗೆ ಸೂಚನೆಯನ್ನು ತತಕ್ಷಣವೇ ರಿಜಿಸ್ಟ್ರಾರರಿಗೆ ನೀಡತಕ್ಕದ್ದು ಮತ್ತು ರಿಜಿಸ್ಟ್ರಾರರವರು ಅದರಂತೆಯೇ ರಿಜಿಸ್ಟರನ್ನು ತಿದ್ದುಪಡಿ ಮಾಡತಕ್ಕದ್ದು. ರಿಜಿಸ್ಟರಿನಲ್ಲಿ ಹೆಸರಿನ ಬದಲಾವಣೆಯನ್ನು ನಮೂದಿಸಲು ಬದಲಾವಣೆಗೆ ಪೂರಕವಾದ ದಾಖಲಾತಿ ಸಾಕ್ಷ್ಯವನ್ನು, ಹೆಸರು ಬದಲಾವಣೆ ಸೂಚನೆಯೊಂದಿಗೆ ರವಾನಿಸತಕ್ಕದ್ದು.

**10. ಪರಿವೀಕ್ಷಣೆ.–** ರಿಜಿಸ್ಟರು ಪರಿಷತ್ತಿನ ಕಛೇರಿಯಲ್ಲಿ, ಕಛೇರಿ ಸಮಯದಲ್ಲಿ ಯಾರೇ ವ್ಯಕ್ತಿಯ ಪರಿವೀಕ್ಷಣೆಗೆ ಮುಕ್ತವಾಗಿರತಕ್ಕದ್ದು.

11. **ನವೀಕರಣ ಶುಲ್ಕ.–** ಪ್ರಕರಣ 16 ರಡಿಯಲ್ಲಿ ಪಾವತಿಸಬೇಕಾದ ನವೀಕರಣ ಶುಲ್ಕ ಪ್ರತೀ ಮೂರು ವರ್ಷಗಳಿಗೆ ಒಂದುರೂಪಾಯಿಯಾಗಿರತಕ್ಕದ್ದು.

**12. ನೋಂದಣಿಯ ನಿರಾಕರಣೆ ಮತ್ತು ಹೆಸರುಗಳನ್ನು ನವೀಕರಿಸುವುದು ಮತ್ತು ಪುನಃ ನಮೂದಿಸುವುದು.–**

(1) ಯಾರೇ ನೋಂದಾಯಿತ ವ್ಯಕ್ತಿಯು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1898ರಲ್ಲಿ ವಿವರಿಸಲಾದಂತೆ ಸಂಜ್ಞೇಯ ಅಪರಾಧವನ್ನು ಮಾಡಿ ತಪ್ಪಿತಸ್ಥನಾಗಿದ್ದರೆ ಪರಿಷತ್ತಿನ ಅಭಿಪ್ರಾಯದಲ್ಲಿ ಆತನು ನೈತಿಕ ಚಾರಿತ್ರ್ಯದ ದೋಷಗಳು ಆತ ವೃತ್ತಿ ಮಾಡಲು ಅನರ್ಹನೆಂದು ತೋರಿಬಂದರೆ ಅಥವಾ ಯುಕ್ತ ವಿಚಾರಣೆಯ ನಂತರ ನಡತೆಯ ತಪ್ಪಿತಸ್ಥನೆಂದುಕಂಡುಬಂದರೆ, ಪರಿಷತ್ತಿನ ಅಭಿಪ್ರಾಯದಲ್ಲಿ ವೃತ್ತಿಗೌರವಕ್ಕೆ ಧಕ್ಕೆ ತರುವುದೆಂದು ಕಂಡುಬಂದರೆ ಅವರ ಹೆಸರನ್ನು ರಿಜಿಸ್ಟರಿನಿಂದ ತೆಗೆದು ಹಾಕತಕ್ಕದ್ದೆಂದು ನಿರ್ದೇಶಿಸತಕ್ಕದ್ದು.

(2) ಪರಿಷತ್ತು, ಯಾರೇ ವ್ಯಕ್ತಿಯ ಹೆಸರನ್ನು ನೋಂದಣಿ ಮಾಡಲು ನಿರಾಕರಿಸಬಹುದು.

13. **ವಿಚಾರಣೆಯ ವಿಧಾನ.–** (1) ನಿಯಮ 12ರ ಅನುಸರಣೆಯಲ್ಲಿ ನೋಂದಣಿ ಮಾಡಲು ನಿರಾಕರಿಸಿದ ಅಥವಾ ರಿಜಿಸ್ಟರಿನಿಂದ ಹೆಸರನ್ನುತೆಗೆದುಹಾಕಲು ಆದೇಶ ಹೊರಡಿಸುವ ಮೊದಲು ಪರಿಷತ್ತು ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಆ ವ್ಯಕ್ತಿಯನ್ನು ವಿವರಣೆ ಅಥವಾ ಪ್ರತಿರಕ್ಷಣೆಗೆ ಆಹ್ವಾನಿಸತಕ್ಕದ್ದು. ಪರಿಷತ್ತು ಅಂತಹ ವ್ಯಕ್ತಿಯ ಹೆಸರನ್ನು ನೋಂದಾಯಿಸಬಾರದು ಅಥವಾ ಸಂದರ್ಭಾನುಸಾರವಾಗಿ ತೆಗೆದು ಹಾಕಬೇಕು ಎಂಬ ಅಭಿಪ್ರಾಯಕ್ಕೆ ಬಂದರೆ, ಅಂತಹ ಆದೇಶವನ್ನು ಹೊರಡಿಸತಕ್ಕದ್ದು.

(2) ಹಿಂದಿನ ಉಪ–ನಿಯಮದಡಿಯ ವಿಚಾರಣೆಯನ್ನು ರಿಜಿಸ್ಟ್ರಾರರು ಪರಿಷತ್ತಿನ ಪರವಾಗಿ ಲಿಖಿತದಲ್ಲಿರುವ ಸೂಚನೆಯನ್ನು ಆ ವ್ಯಕ್ತಿಗೆ ನೀಡುವುದರ ಮೂಲಕ ಪ್ರಾರಂಭಿಸತಕ್ಕದ್ದು. ಅಂತಹ ಸೂಚನೆಯು ಸ್ವರೂಪ ಮತ್ತು ವಿವರಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಪರಿಷತ್ತು ಪ್ರಕರಣವನ್ನು ತೆಗೆದುಕೊಳ್ಳಲು ಇಚ್ಛಿಸಿರುವ ದಿನಾಂಕವನ್ನು ಆತನಿಗೆ ತಿಳಿಸತಕ್ಕದ್ದು ಮತ್ತು ಅಂತಹ ದಿನದಂದು ಪರಿಷತ್ತಿನ ಮುಂದೆ ಹಾಜರಾಗುವಂತೆ ಮತ್ತು ಲಿಖಿತದಲ್ಲಿ ಉತ್ತರಿಸುವಂತೆ ಆತನನ್ನುಆಹ್ವಾನಿಸತಕ್ಕದ್ದು. ಸೂಚನೆಯನ್ನು ವಿಚಾರಣೆ ನಡೆಸುವ ದಿನಾಂಕಕ್ಕಿಂತ ಕನಿಷ್ಠ ಮೂರು ವಾರಗಳ ಮುಂಚೆ ಕಳುಹಿಸತಕ್ಕದ್ದು.

(3) ಮೇಲ್ಕಂಡ ಉಪಬಂಧದಡಿಯ ಯಾವುದೇ ಸೂಚನೆ ಅಥವಾ ಆದೇಶವನ್ನು ರಿಜಿಸ್ಟರಿನಲ್ಲಿ ಕಂಡು ಬರುವ ಆತನ ಖಾಯಂ ವಿಳಾಸಕ್ಕೆ ಅಥವಾ ಅರ್ಜಿಯಲ್ಲಿ ನೀಡಿರುವ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸತಕ್ಕದ್ದು.

14. **ನೋಂದಣಿ ಮತ್ತು ಹೆಸರನ್ನು ಪುನಃ ನಮೂದಿಸುವುದು –** ಪರಿಷತ್ತು ಸರಿಯೆಂದು ತೋರಿದ ಸಾಕಷ್ಟು ಕಾರಣಗಳೊಂದಿಗೆ, ವ್ಯಕ್ತಿಯ ಹೆಸರನ್ನು ರಿಜಿಸ್ಟರಿನಲ್ಲಿ ನೋಂದಾಯಿಸತಕ್ಕದ್ದುಅಥವಾ ಪುನಃನಮೂದಿಸತಕ್ಕದೆಂದು ನಿರ್ದೇಶಿಸಬಹುದು.

15. **ಪಟ್ಟಿಗೆ ನಿಯಮ 12, 13 ಮತ್ತು 14ನ್ನು ಅನ್ವಯಿಸುವುದು.–**

ನಿಯಮ 12, 13, 14ರ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಪಟ್ಟಿಗೆ ಅನ್ವಯಿಸತಕ್ಕದ್ದು.

## ಭಾಗIV

## ವೃತ್ತಿ ನಡೆಸುವುದಕ್ಕೆ ಹಕ್ಕುಳ್ಳ ವ್ಯಕ್ತಿಗಳು ಮತ್ತು ಲೈಸೆನ್ಸ್‌ಕೊಡುವ ಪ್ರಾಧಿಕಾರಗಳ ನಿಯಂತ್ರಣ

**16. ಪ್ರಕರಣ 19ರ ಉದ್ದೇಶಕ್ಕಾಗಿದಾದಿ, ಸೂಲಗಿತ್ತಿ, ಸಹಾಯಕದಾದಿ – ಸೂಲಗಿತ್ತಿಅಥವಾಆರೋಗ್ಯ ಸಂದರ್ಶಕರಂತೆತರಬೇತಿ ಪಡೆಯುವ ವಿಧಾನ.–**

(1)(ಬಿ).– ಪಟ್ಟಿಯಲ್ಲಿ ಯಾರ ಹೆಸರು ನಮೂದಾಗಿದೆಯೋ ಮತ್ತು 19ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರದೇಶದಲ್ಲಿ ದಾದಿ, ಸೂಲಗಿತ್ತಿ, ಸಹಾಯಕ ನರ್ಸ್ – ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕರಾಗಿ ವೃತ್ತಿ ನಡೆಸಲು ಬಯಸುವರೋ, ಆ ವ್ಯಕ್ತಿಯು ಪರಿಶಿಷ್ಟ 18ರಲ್ಲಿ ನಿಯಮಿಸಲಾದ ವಿಧಾನದಲ್ಲಿ ಒಬ್ಬ ದಾದಿ, ಸೂಲಗಿತ್ತಿ, ಸಹಾಯಕದಾದಿ – ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕರಾಗಿ ತರಬೇತಿಯನ್ನು ಪಡೆದಿರುವುದಾಗಿ ಒಂದು ಸಂಸ್ಥೆಯ ಮೇಟ್ರನ್, ವೈದ್ಯಕೀಯ ಅಧಿಕ್ಷಕ ಅಥವಾ ಆ ಸಂಸ್ಥೆಯ ಜವಾಬ್ದಾರಿಯುತ ಅಧಿಕಾರಿಯು ರುಜು ಮಾಡಿರುವ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದ ಹೊರತು 19ನೇ ಪ್ರಕರಣದ (1)ನೇ ಉಪ–ಪ್ರಕರಣದ (ಬಿ) ಖಂಡದಲ್ಲಿ ಒಬ್ಬ ದಾದಿ, ಸೂಲಗಿತ್ತಿ, ಸಹಾಯಕದಾದಿ – ಸೂಲಗಿತ್ತಿ ಅಥವಾ ಆರೋಗ್ಯ ಸಂದರ್ಶಕರಾಗಿ ವೃತ್ತಿ ನಡೆಸಲು ಅನುಮತಿ ನೀಡತಕ್ಕದ್ದಲ್ಲ.

**17. ನೋಂದಾಯಿತ ವ್ಯಕ್ತಿಗಳು ಮತ್ತು ಪಟ್ಟಿಯಲ್ಲಿರುವ ವ್ಯಕ್ತಿಗಳ ಮೇಲ್ವಿಚಾರಣೆ.–** (1) ಲೈಸೆನ್ಸ್ ನೀಡುವ ಪ್ರಾಧಿಕಾರವು ರಿಜಿಸ್ಟರಿನಲ್ಲಿ ನೋಂದಾಯಿತರಾಗಿರುವ ಹೆಸರುಗಳ ಎಲ್ಲಾ ವ್ಯಕ್ತಿಗಳ ಮೇಲೆ ಅಥವ ಪಟ್ಟಿಯಲ್ಲಿ ಸೇರಿಸಿರುವ ಹೆಸರುಗಳ ವ್ಯಕ್ತಿಗಳ ಮೇಲೆ ಮತ್ತು ಪರಿಷತ್ತು ರಚಿಸಿದ ಉಪ–ವಿಧಿಗಳಿಗೆ ಅನುಗುಣವಾಗಿ ತನ್ನಅಧಿಕಾರ ವ್ಯಾಪ್ತಿಯಲ್ಲಿ ಪ್ರದೇಶದಲ್ಲಿ ವೃತ್ತಿ ನಡೆಸುತ್ತಿರುವ ವ್ಯಕ್ತಿಗಳ ಮೇಲೆ ಸಾಮಾನ್ಯ ಮೇಲ್ವಿಚಾರಣೆಯನ್ನುಚಲಾಯಿಸತಕ್ಕದ್ದು.

(2) ಪ್ರತಿಯೊಂದೂ ಲೈಸೆನ್ಸ್ ನೀಡಿಕೆ ಪ್ರಾಧಿಕಾರವು–

(ಎ) ನೋಂದಾಯಿತರಾದ ವ್ಯಕ್ತಿಗಳ ಹೆಸರುಗಳು ಮತ್ತು ವಿಳಾಸಗಳನ್ನು ಮತ್ತು ಪಟ್ಟಿಯಲ್ಲಿ ಸೇರಿಸಲಾಗಿರುವ ಹೆಸರುಗಳನ್ನು ಹೊಂದಿರುವ ಮತ್ತು ಪ್ರತೀ ವರ್ಷ 31ನೇ ಡಿಸೆಂಬರರವರೆಗೆ ತಿದ್ದುಪಡಿ ಮಾಡಲಾದಂತೆ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ವೃತ್ತಿ ಮಾಡುತ್ತಿರುವ ವ್ಯಕ್ತಿಗಳ ಪಟ್ಟಿಯನ್ನು ನಿರ್ವಹಿಸತಕ್ಕದ್ದು ಮತ್ತು ಸಾರ್ವಜನಿಕ ಪರಿವೀಕ್ಷಣೆಗೆ ಎಲ್ಲಾ ಯುಕ್ತ ಸಮಯಗಳಲ್ಲಿ ಲಭ್ಯವಿರುವಂತೆ ಒಂದು ಪ್ರತಿಯನ್ನು ನಿರ್ವಹಿಸತಕ್ಕದ್ದು.

(ಬಿ) ಯಾವುದೇ ಅಪರಾಧದ ತಪ್ಪಿತಸ್ಥನಾದ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ವೃತ್ತಿ ನಡೆಸುತ್ತಿರುವ ಯಾರೇ ನೋಂದಾಯಿತ ವ್ಯಕ್ತಿ ಅಥವಾ ಪಟ್ಟಿಯಲ್ಲಿ ಸೇರಿಸಿರುವ ಹೆಸರನ್ನುಕೂಡಲೇ ಪರಿಷತ್ತಿಗೆ ವರದಿ ಮಾಡತಕ್ಕದ್ದು;

(ಸಿ) ಅಂತಹ ಯಾರೇ ವ್ಯಕ್ತಿ ಕಡೆಯಿಂದಾದ ಯಾವುದೇ ದುರಾಚರಣೆ, ನಿರ್ಲಕ್ಷ ಅಥವಾ ದುರ್ನಡತೆಯ ದೂರುಗಳನ್ನು ಪರಿಷತ್ತಿನ ಗಮನಕ್ಕೆ ತರತಕ್ಕದ್ದು;

(ಡಿ) ಅಂತಹ ವ್ಯಕ್ತಿಯ ಕಡೆಯಿಂದಾದ ದುರಾಚರಣೆ, ನಿರ್ಲಕ್ಷ ಅಥವಾ ದುರ್ನಡತೆಯ ಆರೋಪಗಳ ತನಿಖೆಯಲ್ಲಿ ಪರಿಷತ್ತಿಗೆ ಎಲ್ಲಾ ನೆರವನ್ನು ಒದಗಿಸತಕ್ಕದ್ದು;

(ಇ) ಪ್ರತೀ ತಿಂಗಳ ಮೊದಲ ವಾರದಲ್ಲಿ ಹಿಂದಿನ ತಿಂಗಳಿನಲ್ಲಿ ಆದ ಅಂತಹ ಯಾರೇ ವ್ಯಕ್ತಿಯ ಸಾವು ಅಥವಾ ಹೆಸರು ಅಥವಾ ವಿಳಾಸದಲ್ಲಿ ಆದ ಬದಲಾವಣೆಗಳನ್ನು ಪರಿಷತ್ತಿಗೆ ವರದಿ ಮಾಡತಕ್ಕದ್ದು.

(3) ಲೈಸೆನ್ಸ್ ನೀಡಿಕೆ ಪ್ರಾಧಿಕಾರವುಯಾರೇ ವ್ಯಕ್ತಿ ವೃತ್ತಿ ನಡೆಸುವ ಉದ್ದೇಶವನ್ನು ತಿಳಿಸಿರುವ ಪ್ರಕರಣ 21ರಡಿ ಸೂಚನೆಯನ್ನು ಸ್ವೀಕರಿಸಿದಾಗ ಲೈಸೆನ್ಸ್ ನೀಡಿಕೆ ಪ್ರಾಧಿಕಾರವುಅರ್ಜಿದಾರನು ನೋಂದಾಯಿತ ವ್ಯಕ್ತಿಅಥವಾ ಅವನ ಹೆಸರು ಪಟ್ಟಿಯಲ್ಲಿ ಸೇರಿದೆ ಎಂದು ಮನವರಿಕೆ ಮಾಡಿಕೊಳ್ಳತಕ್ಕದ್ದು ಮತ್ತು ಆತನ ಹೆಸರನ್ನು ಉಪ-ನಿಯಮ (2)ರ ಖಂಡ (ಎ) ರಡಿ ನಿರ್ವಹಿಸಲಾಗುವ ಪಟ್ಟಿಯಲ್ಲಿ ನಮೂದಿಸತಕ್ಕದ್ದು.

## ಭಾಗV

## ದಾದಿಯರ ಸಂಸ್ಥೆಗಳು

**18. ದಾದಿಯರ ಸಂಸ್ಥೆ.-** (1) ದಾದಿಯರನ್ನು ಸರಬರಾಜು ಮಾಡುವುದಕ್ಕಾಗಿ ದಾದಿಯರ ಸಂಸ್ಥೆ ನಡೆಸುವುದಕ್ಕಾಗಿ ಲಿಖಿತದಲ್ಲಿ ಅರ್ಜಿ ಸಲ್ಲಿಸತಕ್ಕದ್ದು ಮತ್ತು ಅದನ್ನು ಪರಿಶಿಷ್ಟ Xರಲ್ಲಿ ನೀಡಿರುವ ನಮೂನೆಯಲ್ಲಿ ಆ ಪ್ರದೇಶದ ಲೈಸೆನ್ಸ್ ನೀಡಿಕೆ ಪ್ರಾಧಿಕಾರಕ್ಕೆ ನೋಂದಾಯಿತ ಅಂಚೆಯ ಮೂಲಕ ಸಲ್ಲಿಸತಕ್ಕದ್ದು. ಅದರೊಂದಿಗೆ ಐವತ್ತು ರೂಪಾಯಿಗಳ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

(2) ಈಗಾಗಲೇ ಇರುವ ದಾದಿಯರ ಸಂಸ್ಥೆಗೆ (ಪ್ರಕರಣ 198 ಉಪ-ಪ್ರಕರಣ (1) ಜಾರಿಗೆ ಬರುವ ಪ್ರದೇಶದಲ್ಲಿ) ಲೈಸೆನ್ಸ್ ಪಡೆಯಲು ಅರ್ಜಿಯನ್ನು ಈ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಎರಡು ತಿಂಗಳುಗಳೊಳಗಾಗಿ ಸಲ್ಲಿಸತಕ್ಕದ್ದು.

(3) ಲೈಸೆನ್ಸನ್ನು ನವೀಕರಣ ಮಾಡಲು ಸಲ್ಲಿಸುವ ಅರ್ಜಿಯನ್ನು ಲೈಸೆನ್ಸ್ ಮುಕ್ತಾಯದ ದಿನಾಂಕಕ್ಕಿಂತ ಎರಡು ತಿಂಗಳುಗಳಿಗೆ ಕಡಿಮೆಯಿಲ್ಲದಂತೆ ಸಲ್ಲಿಸತಕ್ಕದ್ದು.

(4) ಅರ್ಜಿದಾರನು ದಾದಿಯರ ಸಂಸ್ಥೆಗೆ ಸಂಬಂಧಿಸಿದಂತೆ ಲೈಸೆನ್ಸ್ ನೀಡಿಕೆ ಪ್ರಾಧಿಕಾರವು ಅಗತ್ಯಪಡಿಸಿದಂತೆ ತನ್ನ ಸ್ವಾಧೀನತೆಯಲ್ಲಿರುವ ಅಂತಹ ಮುಂದುವರೆದ ಮಾಹಿತಿಯನ್ನು ಲೈಸೆನ್ಸ್ ನೀಡಿಕೆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

## ಭಾಗ –VI

## ತರಬೇತಿ ಸಂಸ್ಥೆಗಳು

**19. ಸಂಸ್ಥೆಗೆ ಅನುಮೋದನೆಯನ್ನು ಹಿಂಪಡೆಯುವುದು ಅಥವಾ ಅನುಮೋದನೆಯನ್ನುಅಥವಾ ಸಂಸ್ಥೆಗೆ ಮಾನ್ಯತೆ ನೀಡುವುದನ್ನು ನಿರಾಕರಿಸುವುದು.**

(1) ಒಂದು ವೇಳೆ ವೃತ್ತಿಯನ್ನು ನಡೆಸುತ್ತಿರುವ ತನ್ನ ಸದಸ್ಯರ ವರದಿಯ ಆಧಾರದ ಮೇಲೆ, ಪರಿಷತ್ತು ಅನುಮೋದಿತ ಮತ್ತು ಮಾನ್ಯತೆ ಹೊಂದಿದ ಸಂಸ್ಥೆಯ ತರಬೇತಿಯು ಸರಿಯಾಗಿ ನಡೆಯುತ್ತಿಲ್ಲವೆಂದು ಅಭಿಪ್ರಾಯಪಟ್ಟರೆ, ಅಂತಹ ಸಂಸ್ಥೆಗೆ ತನ್ನ ಪ್ರತಿರಕ್ಷಣೆಯಲ್ಲಿ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ನಂತರ, ಅದರ ಅನುಮೋದನೆ ಮತ್ತು ಮಾನ್ಯತೆಯನ್ನು ಹಿಂಪಡೆಯಬಹುದು ಮತ್ತು ಪಟ್ಟಿಯಿಂದ ಸಂಸ್ಥೆಯನ್ನು ತೆಗೆದುಹಾಕಬೇಕು ಮತ್ತು ಅಂತಹ ಸಂಸ್ಥೆಯಲ್ಲಿ ಸರಿಯಾದ ತರಬೇತಿಯನ್ನು ನೀಡುವುದಕ್ಕಾಗಿ ಸಂಸ್ಥೆಯು ಸಾಕಷ್ಟು ಏರ್ಪಾಡುಗಳನ್ನು ಮಾಡಿದೆ ಎಂದು ಪರಿಷತ್ತಿಗೆ ಮನವರಿಕೆಯಾಗುವವರೆಗೆ ಅಂತಹ ಸಂಸ್ಥೆಯನ್ನು ಮತ್ತೆ ಅನುಮೋದಿಸತಕ್ಕದ್ದಲ್ಲ ಮತ್ತು ಮಾನ್ಯತೆ ನೀಡತಕ್ಕದ್ದಲ್ಲ.

(2) ನಿಯಮ 12ರಲ್ಲಿ ಉಲ್ಲೇಖಿಸಲಾದ ಆದೇಶವನ್ನು ಅಥವಾ ಸೂಚನೆಯನ್ನು ನೀಡಿದ ವಿಧಾನದಲ್ಲಿಯೇ ಮಾನ್ಯತೆಯನ್ನು ಹಿಂಪಡೆದ ಆದೇಶವನ್ನು ನೀಡತಕ್ಕದ್ದು.

(3) ಪರಿಷತ್ತು ಯಾವುದೇ ಸಂಸ್ಥೆಗೆ ಅನುಮೋದನೆ ನೀಡುವುದು ಮತ್ತು ಮಾನ್ಯತೆ ನೀಡುವುದಕ್ಕೆ ನಿರಾಕರಿಸುವುದರಿಂದ ಬಾಧಿತನಾದ ಯಾರೇ ವ್ಯಕ್ತಿಯು ಪ್ರಕರಣ 24ರಲ್ಲಿ ನಿರ್ದಿಷ್ಟಪಡಿಸಲಾದ ಕಾರ್ಯವಿಧಾನವನ್ನು ಅನುಸರಿಸಬೇಕು.

## ಭಾಗ–VII

## ಸಂಕೀರ್ಣ

**20. ಶುಲ್ಕಗಳು.**–ರಾಜ್ಯ ಸರ್ಕಾರಕ್ಕೆ ಪ್ರಕರಣ 15, ಪ್ರಕರಣ 22ರ ಉಪ–ಪ್ರಕರಣ (5) ಅಥವಾ ಪ್ರಕರಣ 24ರಡಿ ಸಲ್ಲಿಸುವ ಮೇಲ್ಮನವಿಗೆ ಸಂಬಂಧಿಸಿದಂತೆ ಪಾವತಿಸಬೇಕಾದ ಶುಲ್ಕ ರೂಪಾಯಿ ಇಪ್ಪತ್ತೈದು ಇರತಕ್ಕದ್ದು.

## ಅನುಸೂಚಿ –I

## ನಮೂನೆ-'ಎ'

## ಭಾಗ –II, ನಿಯಮ ಸಂ.58 ಉಪ-ನಿಯಮ (1)

## ನಾಮನಿರ್ದೇಶನ ಪತ್ರ

| | | |
|---|---|---|
| 1. | ಅಭ್ಯರ್ಥಿಯ ಪೂರ್ಣ ಹೆಸರು (ಮತದಾರರ ಪಟ್ಟಿಯಲ್ಲಿರುವಂತೆ) | |
| 2. | ಮತದಾರರ ಪಟ್ಟಿಯ ಅಭ್ಯರ್ಥಿಯ ಕ್ರಮ ಸಂಖ್ಯೆ | |
| 3. | ಅಭ್ಯರ್ಥಿಯ ವಿಳಾಸ | |
| 4. | ಮತದಾರರ ಪಟ್ಟಿಯಲ್ಲಿ ಪ್ರಸ್ತಾವಿಸಿದವರ ಹೆಸರು ಮತ್ತುಕ್ರಮ ಸಂಖ್ಯೆ | |
| 5. | ಮತದಾರರ ಪಟ್ಟಿಯಲ್ಲಿ ಅನುಮೋದಿಸಿದವರ ಹೆಸರು ಮತ್ತು ಕ್ರಮ ಸಂಖ್ಯೆ. | |

ಪ್ರಸ್ತಾವಿಸಿದವರ ಸಹಿ ಅನುಮೋದಿಸಿದವರ ಸಹಿ

### ಅಭ್ಯರ್ಥಿಯಿಂದ ಘೋಷಣೆ

ನಾನು ಚುನಾಯಿತವಾದರೆ, ಪರಿಷತ್ತಿಗೆ ಸೇವೆ ಸಲ್ಲಿಸಲು ನಾನು ಇಚ್ಛಿಸುತ್ತೇನೆ ಎಂದು ಘೋಷಣೆ ಮಾಡುತ್ತೇನೆ.

ಅಭ್ಯರ್ಥಿಯ ಸಹಿ.

ಸೂಚನೆ.- (1) ಚುನಾವಣಾಅಧಿಕಾರಿಯು ---------- ರಂದುಅಥವಾಅದಕ್ಕಿಂತ ಮೊದಲು ಸ್ವೀಕರಿಸದ ನಾಮನಿರ್ದೇಶನ ಪತ್ರಗಳ ಅಸಿಂಧುವಾದುವು.

(2) ನಾಮನಿರ್ದೇಶಿತನು ರೂ.50ಗಳ ನಗದು ಅಥವಾ ಮನಿಯಾರ್ಡರನ್ನು ಚುನಾವಣಾಧಿಕಾರಿಗೆ ಸಂದಾಯ ಮಾಡಬೇಕು, ಇದು ಚುನಾವಣಾಧಿಕಾರಿಗೆ -------- ರಂದು ಅಥವಾ ಅದಕ್ಕಿಂತ ಮುಂಚಿತವಾಗಿ ತಲುಪಬೇಕು.

---

-------- ರಂದು ------------ ಗೆ ಸ್ವೀಕರಿಸಲಾಯಿತು.

ಚುನಾವಣಾಧಿಕಾರಿ.

**ಅನುಸೂಚಿ –I**

**ನಮೂನೆ–'ಬಿ'**

**ಮತಪತ್ರ**

**[ಭಾಗ–II ನಿಯಮ ನಂ.58 ಉಪ–ನಿಯಮ (19)]**

ನೋಂದಣಿಸಂಖ್ಯೆ ಅಥವಾ ಮತದಾನ --------------

ಮತಕ್ಷೇತ್ರದ ಹೆಸರು --------------------

| **ಕ್ರಮ ಸಂಖ್ಯೆ** | **ಅಭ್ಯರ್ಥಿಯ ಹೆಸರು** | **ಮತ** |
|---|---|---|
| 1 | | |
| 2 | | |
| 3 | | |
| 4 | | |

ಚುನಾವಣಾಧಿಕಾರಿಯ ಸಹಿ.

**ಸೂಚನೆಗಳು:–**

1. ಭರ್ತಿ ಮಾಡಬೇಕಾದ ಖಾಲಿಸ್ಥಾನಗಳ ಸಂಖ್ಯೆ ---------

2. ನೀವು ಮತ ಹಾಕಲು ಬಯಸುವಅಭ್ಯರ್ಥಿಯ ಹೆಸರಿನ ಮುಂದೆ 'X ' ಗುರುತು ಹಾಕಿ.

3. ಪ್ರತಿಯೊಬ್ಬ ಮತದಾರನು ತನ್ನ ವೈಯಕ್ತಿಕ ಮತಪತ್ರವನ್ನು ನೇರವಾಗಿ ಚುನಾವಣಾಧಿಕಾರಿಗೆ ಕಳುಹಿಸತಕ್ಕದ್ದು.

4. ಮತಪತ್ರವು ಅಸಿಂಧುವಾಗುವುದು: ಒಂದು ವೇಳೆ:–

(ಎ) ಚುನಾವಣಾಧಿಕಾರಿಯ ಸಹಿ ಅಥವಾ ಯಥಾಪ್ರತಿ ಸಹಿಯನ್ನು ಮತಪತ್ರವು ಹೊಂದಿರದಿದ್ದರೆ.

(ಬಿ) ಮತದಾರನುತನ್ನ ಹೆಸರನ್ನು ಸಹಿ ಹಾಕಿರದೆ ಅಥವಾ ಪತ್ರವನ್ನು ಬರೆದರೆ ಅಥವಾ ಆತನ ಮತಪತ್ರವೆಂದು ಗುರುತಿಸಬಹುದಾದಂತೆ ಅದರ ಮೇಲೆ ಗುರುತು ಹಾಕಿದರೆ,

(ಸಿ) ಅದರ ಮೇಲೆ ನಮೂದಿಸಲಾದ ಮತಗಳ ಸಂಖ್ಯೆಯು ಭರ್ತಿ ಮಾಡಬೇಕಾದ ಖಾಲಿಸ್ಥಾನಗಳ ಸಂಖ್ಯೆಯನ್ನು ಮೀರಿದ್ದರೆ,

(ಡಿ) ಅದರ ಮೇಲೆ ನಮೂದಿಸಲಾದ ಮತಗಳ ಸಂಖ್ಯೆಯು ಭರ್ತಿ ಮಾಡಬೇಕಾದ ಖಾಲಿಸ್ಥಾನಗಳ ಸಂಖ್ಯೆಗಿಂತ ಕಡಿಮೆಯಿದ್ದರೆ,

(ಇ) ಚುನಾವಣಾಧಿಕಾರಿಯು ಒಬ್ಬರೇ ಮತದಾರರಿಂದ ಒಂದಕ್ಕಿಂತ ಹೆಚ್ಚು ಮತಪತ್ರವನ್ನು ಸ್ವೀಕರಿಸಿದರೆ, ಅಂತಹಎಲ್ಲಾ ಮತಪತ್ರಗಳನ್ನು ಅಸಿಂಧುವೆಂದು ಪರಿಗಣಿಸತಕ್ಕದ್ದು.

5. ಮತದಾರನು ಯುಕ್ತವಾಗಿ ಭರ್ತಿ ಮಾಡಿದ ಮತಪತ್ರವನ್ನು ಸಣ್ಣ ಕವರ್‌ನಲ್ಲಿ ಲಗತ್ತಿಸತಕ್ಕದ್ದು ಮತ್ತು ಆ ಕವರನ್ನು ಚುನಾವಣಾಧಿಕಾರಿಯು ನೀಡಿರುವ ದೊಡ್ಡಕವರ್‌ನಲ್ಲಿ ಲಗತ್ತಿಸತಕ್ಕದ್ದು ಮತ್ತು ತನ್ನ ಪೂರ್ಣ ಹೆಸರನ್ನು (ಬೆರಳಚ್ಚು ಮಾಡಿರಬಹುದು) ಬರೆಯತಕ್ಕದ್ದು ಮತ್ತು ದೊಡ್ಡ ಕವರ್‌ನ ಎಡಭಾಗದ ಮೂಲೆಯಲ್ಲಿ ಮುದ್ರಿತವಾಗಿರುವ ಕಾಲಂನಲ್ಲಿ ಸಹಿಯನ್ನು ಹಾಕತಕ್ಕದ್ದು. ಮತದಾರನು ತನ್ನ ಪೂರ್ಣಹೆಸರು ಮತ್ತು ಸಹಿಯನ್ನು ಹಾಕಲು ವಿಫಲನಾದರೆ, ಮತಪತ್ರವು ಅಸಿಂಧುವಾಗತಕ್ಕದ್ದು.

**ಅನುಸೂಚಿ –I**

**ನಮೂನೆ–'ಸಿ'**

**ನೋಂದಣೆಗಾಗಿ ಅರ್ಜಿ ನಮೂನೆ**

**[ನಿಯಮ 7(2) ಭಾಗ –III]**

**ಕರ್ನಾಟಕ ನರ್ಸಿಂಗ್ ಪರಿಷತ್ತು**

**ನೋಂದಣೆಗಾಗಿ ಅರ್ಜಿ**

ಗೆ,

ರಿಜಿಸ್ಟ್ರಾರ್,
ಕರ್ನಾಟಕ ಶುಶ್ರೂಷಾ ಪರಿಷತ್ತು,
ವೈದ್ಯಕೀಯ ಸೇವೆಗಳ ನಿರ್ದೇಶನಾಲಯ,
ಬೆಂಗಳೂರು.

ಮಾನ್ಯರೇ,

ಶ್ರೀ/ಶ್ರೀಮತಿ/ಕುಮಾರಿ -------------- ಆದ ನಾನು, ಕರ್ನಾಟಕ ಶುಶ್ರೂಷಾ ಪರಿಷತ್ತಿನಲ್ಲಿ ---------- ಆಗಿ ನೋಂದಣಿಯಾಗಲು ಯುಕ್ತವಾಗಿ ಭರ್ತಿಮಾಡಿದ ನನ್ನ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ.

ತಮ್ಮ ವಿಶ್ವಾಸಿ,
(ಅಭ್ಯರ್ಥಿಯ ಸಹಿ)

| | | |
|---|---|---|
| 1. | ಅಭ್ಯರ್ಥಿಯ ಪೂರ್ಣ ಹೆಸರು (ದೊಡ್ಡ ಅಕ್ಷರಗಳಲ್ಲಿ) | |
| 2. | ಹುಟ್ಟಿದ ದಿನಾಂಕ (ಕ್ರಿಶ್ಚಿಯನ್ ಯುಗದ ಪ್ರಕಾರ) | |
| 3. | ವೈವಾಹಿಕ ಸ್ಥಿತಿ (ಅವಿವಾಹಿತ/ವಿವಾಹಿತ/ವಿಧವೆ) | |
| 4. | ಖಾಯಂ ವಿಳಾಸ | |
| 5. | ತರಬೇತಿ ಸಂಸ್ಥೆ (ದಿನಾಂಕದೊಂದಿಗೆ) | |
| 6. | ತರಬೇತಿ ಪಡೆದದ್ದು | |
| 7. | ಇಬ್ಬರು ಉಲ್ಲೇಖಿತರ ಹೆಸರು ಮತ್ತು ವಿಳಾಸ | |
| 8. | ಗುರುತಿನ ಎರಡು ಮಚ್ಚೆಗಳು | |

**ಅನುಸೂಚಿ –I**

**ನಮೂನೆ–'ಡಿ'**

**ರಿಜಿಸ್ಟರ್ ಸಂ.**

**ಕರ್ನಾಟಕ ಶುಶ್ರೂಷಾ ಪರಿಷತ್ತು**

**ದಾದಿ**

(ಕರ್ನಾಟಕದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961)

(1962ರ ಕರ್ನಾಟಕ ಅಧಿನಿಯಮ ಸಂ.4)

[ಕರ್ನಾಟಕ ಶುಶ್ರೂಷಾ ಪರಿಷತ್ತಿನ ನಿಯಮಗಳು ಭಾಗIIIರ ನಿಯಮ 7(3)]

ಈ ಮೂಲಕ ದೃಢೀಕರಿಸುವುದೇನೆಂದರೆ, ಶ್ರೀ/ಶ್ರೀಮತಿ -------------- ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961 ರಡಿ ನಿರ್ವಹಿಸಲಾದ ರಿಜಿಸ್ಟರಿನ ಭಾಗ 'ಎ', ವಿಭಾಗI ರಲ್ಲಿ ----------ರಂದು ದಾಖಲಾತಿ ಹೊಂದಿದ್ದು, ಜನರಲ್ ನರ್ಸಿಂಗ್‌ನಲ್ಲಿ ಗೊತ್ತುಪಡಿಸಲಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ ಮತ್ತು ಆತ/ಆಕೆ "ನೋಂದಾಯಿತದಾದಿ" ಎಂಬ ಹೆಸರನ್ನು ತೆಗೆದುಕೊಳ್ಳಲು ಮತ್ತು ಬಳಸಲು ಹಕ್ಕುಳ್ಳವರಾಗಿರುತ್ತಾರೆ.

....................
ಪರಿಷತ್ತಿನ ರಿಜಿಸ್ಟ್ರಾರ್
(ಪರಿಷತ್ತಿನ ಮೊಹರು)
ಬೆಂಗಳೂರು
ದಿನಾಂಕ............19...

**ಅನುಸೂಚಿ –I**

**ನಮೂನೆ–‘ಇ’**

**ರಿಜಿಸ್ಟರ್ ಸಂ.**

**ಕರ್ನಾಟಕ ಶುಶ್ರೂಷಾ ಪರಿಷತ್ತು**

**ಸೂಲಗಿತ್ತಿ**

(ಕರ್ನಾಟಕದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961)

(1962ರ ಕರ್ನಾಟಕ ಅಧಿನಿಯಮ ಸಂ.4)

[ಕರ್ನಾಟಕ ಶುಶ್ರೂಷಾ ಪರಿಷತ್ತಿನ ನಿಯಮಗಳು ಭಾಗIIIರ ನಿಯಮ 7(3)]

ಈ ಮೂಲಕ ದೃಢೀಕರಿಸುವುದೇನೆಂದರೆ, ಶ್ರೀ/ಶ್ರೀಮತಿ -------------- ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961 ರಡಿ ನಿರ್ವಹಿಸಲಾದ ರಿಜಿಸ್ಟರಿನ ಭಾಗ ‘ಎ’, ವಿಭಾಗI ರಲ್ಲಿ -----------ರಂದು ದಾಖಲಾತಿ ಹೊಂದಿದ್ದು, ಜನರಲ್ ನರ್ಸಿಂಗ್‌ನಲ್ಲಿ ಗೊತ್ತುಪಡಿಸಲಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ ಮತ್ತು ಆತ/ಆಕೆ “ನೋಂದಾಯಿತ ಸೂಲಗಿತ್ತಿ” ಎಂಬ ಹೆಸರನ್ನು ತೆಗೆದುಕೊಳ್ಳಲು ಮತ್ತು ಬಳಸಲು ಹಕ್ಕುಳ್ಳವರಾಗಿರುತ್ತಾರೆ.

....................
ಪರಿಷತ್ತಿನ ರಿಜಿಸ್ಟ್ರಾರ್
(ಪರಿಷತ್ತಿನ ಮೊಹರು)
ಬೆಂಗಳೂರು
ದಿನಾಂಕ............19...

**ಅನುಸೂಚಿ –I**

**ನಮೂನೆ–‘ಎಫ್’**

**ರಿಜಿಸ್ಟರ್ ಸಂ.**

**ಕರ್ನಾಟಕ ಶುಶ್ರೂಷಾ ಪರಿಷತ್ತು**

**ಮನೋವೈದ್ಯಕೀಯ ದಾದಿ**

(ಕರ್ನಾಟಕದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961)

(1962ರ ಕರ್ನಾಟಕ ಅಧಿನಿಯಮ ಸಂ.4)

[ಕರ್ನಾಟಕ ಶುಶ್ರೂಷಾ ಪರಿಷತ್ತಿನ ನಿಯಮಗಳು ಭಾಗIIIರ ನಿಯಮ 7(3)]

ಈ ಮೂಲಕ ದೃಢೀಕರಿಸುವುದೇನೆಂದರೆ, ಶ್ರೀ/ಶ್ರೀಮತಿ --------------- ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961 ರಡಿ ನಿರ್ವಹಿಸಲಾದ ರಿಜಿಸ್ಟರಿನ ಭಾಗ 'ಎ', ವಿಭಾಗI ರಲ್ಲಿ -----------ರಂದು ದಾಖಲಾತಿ ಹೊಂದಿದ್ದು, ಜನರಲ್ ನರ್ಸಿಂಗ್‌ನಲ್ಲಿ ಗೊತ್ತುಪಡಿಸಲಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ ಮತ್ತು ಆತ/ಆಕೆ "ನೋಂದಾಯಿತ ಮನೋವೈದ್ಯಕೀಯ ದಾದಿ" ಎಂಬ ಹೆಸರನ್ನು ತೆಗೆದುಕೊಳ್ಳಲು ಮತ್ತು ಬಳಸಲು ಹಕ್ಕುಳ್ಳವರಾಗಿರುತ್ತಾರೆ.

....................
ಪರಿಷತ್ತಿನ ರಿಜಿಸ್ಟ್ರಾರ್
(ಪರಿಷತ್ತಿನ ಮೊಹರು)
ಬೆಂಗಳೂರು
ದಿನಾಂಕ.............19...

**ಅನುಸೂಚಿ –I**

**ನಮೂನೆ–'ಜಿ'**

**ರಿಜಿಸ್ಟರ್ ಸಂ.**

**ಕರ್ನಾಟಕ ಶುಶ್ರೂಷಾ ಪರಿಷತ್ತು**

**ಆರೋಗ್ಯ ಸಂದರ್ಶಕ**

(ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961)

(1962ರ ಕರ್ನಾಟಕ ಅಧಿನಿಯಮ ಸಂ.4)

[ಕರ್ನಾಟಕ ಶುಶ್ರೂಷಾ ಪರಿಷತ್ತಿನ ನಿಯಮಗಳು ಭಾಗIIIರ ನಿಯಮ 7(3)]

ಈ ಮೂಲಕ ದೃಢೀಕರಿಸುವುದೇನೆಂದರೆ, ಶ್ರೀ/ಶ್ರೀಮತಿ --------------- ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961 ರಡಿ ನಿರ್ವಹಿಸಲಾದ ರಿಜಿಸ್ಟರಿನ ಭಾಗ 'ಎ', ವಿಭಾಗI ರಲ್ಲಿ -----------ರಂದು ದಾಖಲಾತಿ ಹೊಂದಿದ್ದು, ಜನರಲ್ ನರ್ಸಿಂಗ್‌ನಲ್ಲಿ ಗೊತ್ತುಪಡಿಸಲಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ ಮತ್ತು ಆತ/ಆಕೆ "ನೋಂದಾಯಿತ ಆರೋಗ್ಯ ಸಂದರ್ಶಕ" ಎಂಬ ಹೆಸರನ್ನು ತೆಗೆದುಕೊಳ್ಳಲು ಮತ್ತು ಬಳಸಲು ಹಕ್ಕುಳ್ಳವರಾಗಿರುತ್ತಾರೆ.

....................
ಪರಿಷತ್ತಿನ ರಿಜಿಸ್ಟ್ರಾರ್
(ಪರಿಷತ್ತಿನ ಮೊಹರು)
ಬೆಂಗಳೂರು
ದಿನಾಂಕ.............19...

**ಅನುಸೂಚಿ –I**

**ನಮೂನೆ–'ಎಚ್'**

**ರಿಜಿಸ್ಟರ್ ಸಂ.**

**ಕರ್ನಾಟಕ ಶುಶ್ರೂಷಾ ಪರಿಷತ್ತು**

**ಸಹಾಯಕ ದಾದಿ–ಸೂಲಗಿತ್ತಿ**

(ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961)

(1962ರ ಕರ್ನಾಟಕ ಅಧಿನಿಯಮ ಸಂ.4)

[ಕರ್ನಾಟಕ ಶುಶ್ರೂಷಾ ಪರಿಷತ್ತಿನ ನಿಯಮಗಳು ಭಾಗIIIರ ನಿಯಮ 7(3)]

ಈ ಮೂಲಕ ದೃಢೀಕರಿಸುವುದೇನೆಂದರೆ, ಶ್ರೀ/ಶ್ರೀಮತಿ ––––––––––––––– ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961 ರಡಿ ನಿರ್ವಹಿಸಲಾದ ರಿಜಿಸ್ಟರಿನ ಭಾಗ 'ಎ', ವಿಭಾಗI ರಲ್ಲಿ –––––––––––ರಂದು ದಾಖಲಾತಿ ಹೊಂದಿದ್ದು, ಜನರಲ್ ನರ್ಸಿಂಗ್‌ನಲ್ಲಿ ಗೊತ್ತುಪಡಿಸಲಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ ಮತ್ತು ಆತ/ಆಕೆ "ನೋಂದಾಯಿತ ಸಹಾಯಕ ದಾದಿ–ಸೂಲಗಿತ್ತಿ" ಎಂಬ ಹೆಸರನ್ನು ತೆಗೆದುಕೊಳ್ಳಲು ಮತ್ತು ಬಳಸಲು ಹಕ್ಕುಳ್ಳವರಾಗಿರುತ್ತಾರೆ.

....................
ಪರಿಷತ್ತಿನ ರಿಜಿಸ್ಟ್ರಾರ್
(ಪರಿಷತ್ತಿನ ಮೊಹರು)
ಬೆಂಗಳೂರು
ದಿನಾಂಕ.............19...

**ಆರೋಗ್ಯ ಮತ್ತು ಪೌರಾಡಳಿತ ಸಚಿವಾಲಯ**

**ಅಧಿಸೂಚನೆ**

**ಬೆಂಗಳೂರು, 30 ನೇ ಜುಲೈ 1968**

**ಎಸ್.ಒ.1626.–** ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 4) 1ನೇ ಪ್ರಕರಣದ (3) ನೇ ಉಪ ಪ್ರಕರಣದ (ಎ) ಖಂಡದ (ii) ನೇ ಉಪ ಖಂಡದಿಂದ ಪ್ರದಾನ ಮಾಡಲಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1968ರ ಆಗಸ್ಟ್ 16 ನೇ ದಿನವನ್ನು ಸದರಿ ಅಧಿನಿಯಮದ II, III, V ಮತ್ತು VI ನೇ ಭಾಗಗಳು ಮತ್ತು VIIನೇ ಭಾಗದ ಉಳಿದ ಪ್ರಕರಣಗಳು ಇಡೀ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

(ಸಂ: ಪಿಎಚ್‌ಎಸ್ 22 ಎಂಡಿಎ 62)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಹಿ/–

**ಬಿ. ಎಸ್. ಶ್ರೀಕಂಠಯ್ಯ,**

ಸರ್ಕಾರದ ಕಾರ್ಯದರ್ಶಿ,

ಆರೋಗ್ಯ ಮತ್ತು ಪೌರಾಡಳಿತ ಇಲಾಖೆ.

**ಆರೋಗ್ಯ ಮತ್ತು ಪೌರಾಡಳಿತ ಸಚಿವಾಲಯ**

**ಅಧಿಸೂಚನೆ**

**ಬೆಂಗಳೂರು, 30 ನೇ ಆಗಸ್ಟ್ 1968**

**ಎಸ್.ಒ.1843.–** ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 4) 3ನೇ ಪ್ರಕರಣದ (1) ನೇ ಉಪ ಪ್ರಕರಣದಿಂದ ಪ್ರದಾನ ಮಾಡಲಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, ಸದರಿ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರಲು, ಈ ಮೂಲಕ "ಕರ್ನಾಟಕ ಶುಶ್ರೂಷಾ ಪರಿಷತ್ತು" ಎಂದು ಕರೆಯಲಾಗುವ ಪರಿಷತ್ತನ್ನು ಸ್ಥಾಪಿಸುತ್ತದೆ.

(ಸಂ: ಎಚ್‌ಎಂಎ 22 ಎಂಡಿಎ 62)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಹಿ/–

**ಬಿ. ಎಸ್. ಶ್ರೀಕಂಠಯ್ಯ,**

ಸರ್ಕಾರದ ಕಾರ್ಯದರ್ಶಿ,

ಆರೋಗ್ಯ ಮತ್ತು ಪೌರಾಡಳಿತ ಇಲಾಖೆ.

**ಆರೋಗ್ಯ ಮತ್ತು ಪೌರಾಡಳಿತ ಸಚಿವಾಲಯ**

**ಆದೇಶ**

**ಬೆಂಗಳೂರು, 30 ನೇ ಆಗಸ್ಟ್ 1968**

**ಎಸ್.ಓ.1846.–** ಕರ್ನಾಟಕ ದಾದಿಯರು, ಸೂಲಗಿತ್ತಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 4) 3ನೇ ಪ್ರಕರಣದ (2) ನೇ ಉಪ ಪ್ರಕರಣದಿಂದ ಪ್ರದಾನ ಮಾಡಲಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಅಧಿಸೂಚನೆ ಸಂ: ಪಿಎಚ್ಎಸ್ 22 ಎಂಡಿಎ 62, ದಿನಾಂಕ 30 ನೇ ಜುಲೈ 1968 ರಲ್ಲಿ ಸ್ಥಾಪಿತವಾದ ಕರ್ನಾಟಕ ಶುಶ್ರೂಷಾ ಪರಿಷತ್ತು ಈ ಮುಂದಿನ ಸದಸ್ಯರನ್ನು ಹೊಂದಿರಬೇಕೆಂದು ನಿರ್ದೇಶಿಸುತ್ತದೆ.

| | | |
|---|---|---|
| 1. | ನಿರ್ದೇಶಕರು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,<br>ಕರ್ನಾಟಕ, ಬೆಂಗಳೂರು. | |
| 2. | ಜಂಟಿ ನಿರ್ದೇಶಕರು,<br>ಆರೋಗ್ಯ ಸೇವೆಗಳು(ವೈದ್ಯಕೀಯ ಶಿಕ್ಷಣ)ಮೈಸೂರು. | |
| 3. | ಅಧೀಕ್ಷಕರು,<br>ನರ್ಸಿಂಗ್ ಸೇವೆಗಳು, ಕರ್ನಾಟಕ ಸರ್ಕಾರ | 3ನೇ ಪ್ರಕರಣದ (2) ನೇ ಉಪ ಪ್ರಕರಣ ಖಂಡ (ಎ) ಯಡಿಯಲ್ಲಿ |
| 4. | ಮದರ್ ಮೇರಿ ಕೋಲ್ಮನ್,<br>ಸೇಂಟ್ ಮಾರ್ಥಾಸ್ ಆಸ್ಪತ್ರೆ,ಬೆಂಗಳೂರು. | |
| 5. | ಶ್ರೀಮತಿ ಪಿ.ಸುಮಂತ ಕಣ್ವ,<br>ದಾದಿ, ಸಿವಿಲ್ ಆಸ್ಪತ್ರೆ,ಗುಲ್ಬರ್ಗ. | |
| 6. | ಶ್ರೀಮತಿ ಪಿ ನಾರಾಯಣ್ ರಾವ್,<br>ದಾದಿ, ಸಿವಿಲ್ ಆಸ್ಪತ್ರೆ,ಬೆಳಗಾವಿ. | |
| 7. | ಶ್ರೀ ಚಂದ್ರಶೇಖರ್ ದಾಂಬೆ, | |

| | | |
|---|---|---|
| | ದಾದಿ, ವಿಕ್ಟೋರಿಯ ಆಸ್ಪತ್ರೆ,ಬೆಂಗಳೂರು. | |
| 8. | ಶ್ರೀ ಮತಿ ಪ್ರೇಮಲತಾ ಗೋಪಿನಾಥ್,<br><br>ಸೂಲಗಿತ್ತಿ, ವಾಣಿ ವಿಲಾಸ್ ಆಸ್ಪತ್ರೆ, ಬೆಂಗಳೂರು | 3ನೇ ಪ್ರಕರಣದ (2) ನೇ ಉಪ ಪ್ರಕರಣದ ಪರಂತುಕದಡಿಯಲ್ಲಿ |
| 9. | ಶ್ರೀಮತಿ ಎಫ್.ಸೆಲ್ವನ್,<br><br>ಸೂಲಗಿತ್ತಿ, ಬೌರಿಂಗ್ ಆಸ್ಪತ್ರೆ, ಬೆಂಗಳೂರು | |
| 10. | ಶ್ರೀಮತಿ ಜೆ.ಜೋಸೆಫಿನ್ ಆಂಟೆ,ಸಹಾಯಕ ದಾದಿ–ಸೂಲಗಿತ್ತಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೋಡಿಗೊಂಡನಹಳ್ಳಿ,ಬೆಂಗಳೂರು ಜಿಲ್ಲೆ. | |
| 11. | ಶ್ರೀಮತಿ ಕೆ.ಪ್ರಫುಲ್ಲಾ, ಆರೋಗ್ಯ ಸಂದರ್ಶಕರು, ನೆಲಮಂಗಲ, ಬೆಂಗಳೂರು ಜಿಲ್ಲೆ | |
| 12. | ಡೀನ್, ವೈದ್ಯಕೀಯ ಕಾಲೇಜು, ಮೈಸೂರು. | |
| 13. | ಡೀನ್, ಕರ್ನಾಟಕ ವೈದ್ಯಕೀಯ ಕಾಲೇಜು ಆಸ್ಪತ್ರೆ, ಹುಬ್ಬಳ್ಳಿ | |
| 14. | ಶ್ರೀಮತಿ ಇ.ಪಿಂಟೋ, ನರ್ಸಿಂಗ್ ಅಧೀಕ್ಷಕರು,ಆರೋಗ್ಯ ಸಂದರ್ಶಕರು ತರಬೇತಿ ಕೇಂದ್ರ, ವಿಕ್ಟೋರಿಯ ಆಸ್ಪತ್ರೆ,ಬೆಂಗಳೂರು. | |
| 15. | ಶ್ರೀಮತಿ ಎಫ್.ಮಡಾನಾ, ನರ್ಸಿಂಗ್ ಅಧೀಕ್ಷಕರು,ಗ್ರೇಡ್ I ವೆನ್ ಲಾಕ್ ಆಸ್ಪತ್ರೆ, ಮಂಗಳೂರು. | |
| 16. | ಶ್ರೀ ಎಂ. ಎ.ಅಹದ್, ಪ್ರಾಂಶುಪಾಲರು, ನರ್ಸಿಂಗ್ ಶಾಲೆ,<br><br>ವಿಕ್ಟೋರಿಯ ಆಸ್ಪತ್ರೆ,ಬೆಂಗಳೂರು. | |
| 17. | ಡಾ.ಎಂ. ಗುರುದಾಸ್, ಅಧ್ಯಕ್ಷರು, ಭಾರತೀಯ ವೈದ್ಯಕೀಯ ಸಂಘ, ರಾಜ್ಯ ಶಾಖೆ,ಬೆಂಗಳೂರು. | |
| 18. | ಡಾ.ಎ.ವಿ.ಸುಬ್ರಮಣ್ಯಂ, ಮಕ್ಕಳಬಸವಣ್ಣ ಗುಡಿ ರಸ್ತೆ,<br><br>ನಗತ್ ್ ಪೇಟೆ, ಬೆಂಗಳೂರು. | 3ನೇ ಪ್ರಕರಣದ (2) ನೇ ಉಪ ಪ್ರಕರಣದ ಪರಂತುಕದಡಿಯಲ್ಲಿ |
| 19. | ಶ್ರೀಮತಿ ಜೆ.ಎನ್ ಮಾರ್ಟಿನ್, ಅಧ್ಯಕ್ಷರು, ಟಿ.ಎನ್.ಎ.ಐ, ರಾಜ್ಯಶಾಖೆ, ಬೆಂಗಳೂರು. | |
| 20. | ಶ್ರೀ ಟಿ.ಬಿ ಮಾದಪ್ಪ, ಎಂ.ಬಿಬಿ.ಬಿ.ಎಸ್.,<br><br>ಉಪನಿರ್ದೇಶಕರು, ವೈದ್ಯಕೀಯ ಸೇವೆಗಳು(ನಿವೃತ್ತ) | |
| 21. | ಶ್ರೀಮತಿ ಎಮ್.ಸಿ.ಡಾಲ್ಬಿ, 14, ವೆಲ್ಲಿಂಗ್ ಟನ್ ರಸ್ತೆ, ರಿಚ್ಮಂಡ್ ಟೌನ್, ಬೆಂಗಳೂರು. | 2ನೇ ಪ್ರಕರಣದ (2) ನೇ ಉಪ ಪ್ರಕರಣದ ಖಂಡ (ಸಿ) ಯಡಿಯಲ್ಲಿ ನಾಮನಿರ್ದೇಶಿತರಾದವರು. |
| 22. | ಶ್ರೀಮತಿ ಎ.ಥಾಮಸ್, ಎಸ್.ಡಿ.ಎಸ್ ಕ್ಷಯದಾಸ್ಪತ್ರೆ, ಬೆಂಗಳೂರು. | |

(ಸಂ: ಎಚ್‌ಎಂಎ 22 ಎಂಡಿಎ 62)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಹಿ/–

**ಬಿ. ಎಸ್. ಶ್ರೀಕಂಠಯ್ಯ,**

ಸರ್ಕಾರದ ಕಾರ್ಯದರ್ಶಿ,

ಆರೋಗ್ಯ ಮತ್ತು ಪೌರಾಡಳಿತ ಇಲಾಖೆ.